ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 93 RNI Number : KNKAN/25/A2770 12-04-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :93 ರಾಯಚೂರು 12-04-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಊಹಾ ಪತ್ರಿಕೋದ್ಯಮ ಅತ್ಯಂತ ಅಪಾಯಕಾರಿ : ಸಿಎಂ

ಬೀದರ್ ಏ11: ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವ ಕೆಲಸ ಮಾಡುತ್ತಿದ್ದೀವಾ ಎಂದು ಪತ್ರಕರ್ತರು ತಮ್ಮನ್ನು ತಾವು ನೋಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಊಹಾ ಪತ್ರಿಕೋದ್ಯಮ ಅತ್ಯಂತ ಅಪಾಯಕಾರಿಯಾದದ್ದು. ಕ್ಷುಲ್ಲಕ ವಿಚಾರವನ್ನು ದಿನವಿಡೀ ತೋರಿಸುವವರು ಅದರ ಪರಿಣಾಮದ ಬಗ್ಗೆಯೂ ಯೋಚಿಸಬೇಕು. ಗಂಡ ಹೆಂಡತಿ ಜಗಳವನ್ನು ಇಡೀ ದಿನ ತೋರಿಸಿದರೆ ಅದರಿಂದ ಸಮಾಜಕ್ಕೆ ಏನು ಪ್ರಯೋಜನ ಎಂದು ಪ್ರಶ್ನಿಸಿದರು.ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವ ಕೆಲಸ ಮಾಡುತ್ತಿದ್ದೀವಾ ಎಂದು ಪತ್ರಕರ್ತರು ತಮ್ಮನ್ನು ತಾವು ನೋಡಿಕೊಳ್ಳಬೇಕು.

ಅಂಬೇಡ್ಕರ್ ಮತ್ತು ಮಹಾತ್ಮಗಾಂಧಿ ಇಬ್ಬರೂ ಪತ್ರಕರ್ತರಾಗಿ ಧ್ವನಿ ಇಲ್ಲದವರ ಧ್ವನಿಯಾಗಿದ್ದರು. ಸಮಾಜದಲ್ಲಿರುವ ನ್ಯೂನ್ಯತೆಗಳನ್ನು ಹೋಗಲಾಡಿಸಿ ಸಮಾಜವನ್ನು ಕಟ್ಟುವ ಕಾಯಕವನ್ನು ಬಸವಾದಿ ಶರಣರು ಮಾಡಿದ್ದರು. ಶರಣರ ಆಶಯದ ಸಮಸಮಾಜ ಆಗದಿದ್ದರೆ ಅಸಮಾನತೆ ಮುಂದುವರೆಯುತ್ತದೆ. ಮುಂದುವರೆಯಲಿ ಎನ್ನುವುದು ಪಟ್ಟಭದ್ರರ ಹಿತಾಸಕ್ತಿಯಾಗಿದೆ ಎಂದರು.



ಬಸವಣ್ಣ ತಿರಸ್ಕರಿದ್ದ ಕರ್ಮಸಿದ್ಧಾಂತವನ್ನು ಪಾಲಿಸುವವರು ಈಗ ಹೆಚ್ಚಾಗಿದ್ದಾರೆ. ಈ ಮೌಢ್ಯ ಆಚರಿಸುವವರೆಲ್ಲಾ ವಿದ್ಯಾವಂತರೇ ಎನ್ನುವುದು ಬೇಸರದ ಸಂಗತಿ ಎಂದರು.

ಆದ್ದರಿಂದ ವೈಚಾರಿಕತೆ ಇರುವ ವೈಜ್ಞಾನಿಕ ಶಿಕ್ಷಣ ಪದ್ಧತಿ ಅಗತ್ಯ. ಯಾವ ದೇವರೂ ಯಾರನ್ನೂ ಕೂಡ ಅವಿದ್ಯಾವಂತನಾಗು ಅಂತಾಗಲೀ, ಕೆಳ ಜಾತಿಯಲ್ಲೇ ಹುಟ್ಟು ಎಂದು ಬಯಸುವುದಿಲ್ಲ. ಈ ಅರಿವನ್ನು ಜನರಲ್ಲಿ ಹೆಚ್ಚಿಸುವ ಕೆಲಸ ಪತ್ರಕರ್ತರಿಂದ ಆಗಬೇಕು. ಪತ್ರಕರ್ತರು ಕೇವಲ ಮಾಹಿತಿ ಕೊಡುವವರಾಗದೆ, ಸಮಾಜ ಸುಧಾರಣೆಗೂ ಒತ್ತು ನೀಡಬೇಕು ಎಂದರು.

ಅಂಬೇಡ್ಕರ್ ಅವರ ಆಶಯದಂತೆ ಎಲ್ಲರಿಗೂ ಆರ್ಥಿಕ, ಸಾಮಾಜಿಕ ಶಕ್ತಿ ಕೊಡುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ 2013 ರಲ್ಲೂ ಮಾಡಿತ್ತು. ಈಗಲೂ ಮುಂದುವರೆಸಿದ್ದೇವೆ. ನಾವು ಬಡವರ ಪರವಾದ ಯೂನಿವರ್ಸಲ್ ಬೇಸಿಕ್ ಇನ್ ಕಂ ಆರ್ಥಿಕತೆಯನ್ನು ಪಾಲುಸುತ್ತಿದ್ದೇವೆ. ಇದನ್ನು ಪತ್ರಕರ್ತರು ಅರ್ಥ ಮಾಡಿಕೊಳ್ಳಬೇಕುಎಂದರು.

ಜಾತಿ ಸಮಾಜ ಚಲನೆ ಇಲ್ಲದ್ದು. ಸಮಾಜವನ್ನು ಚಲನಶೀಲಗೊಳಿಸಲು ವಸ್ತುನಿಷ್ಠವಾದ ವೃತ್ತಿಪರತೆಯನ್ನು ಪತ್ರಕರ್ತರು ಪಾಲಿಸಬೇಕು ಎಂದರು.ಕೆಲವು ಒಳ್ಳೆ ಪತ್ರಕರ್ತರೂ ಇದ್ದಾರೆ. ಆದರೆ ಬಹಳಷ್ಟು ಮಾಧ್ಯಮ ಸಂಸ್ಥೆಗಳು ಕಾರ್ಪೋರೇಟ್ ಹಿಡಿತಕ್ಕೆ ಒಳಪಟ್ಟಿವೆ. ಪತ್ರಕರ್ತರು ಸತ್ಯ ಬರೆದರೂ ಕೆಲವೊಮ್ಮೆ ಸಂಪಾದಕರುಗಳು ಮಾಲೀಕರ ಒತ್ತಡಕ್ಕೆ ಮಣಿದು ಬದಲಾಯಿಸಿಬಿಡುತ್ತಾರೆ. ನಾನು ಮಂತ್ರಿಯಾಗಿ 40 ವರ್ಷ ಆಯ್ತು. ನಮ್ಮ ಸರ್ಕಾರದ ಪರವಾಗಿ ಬರೆಯಿರಿ ಎಂದು ಇವತ್ತಿನವರೆಗೂ ನಾನು ಯಾರನ್ನೂ ಕೇಳಿಲ್ಲ ಎಂದರು. ಜನಸಾಮಾನ್ಯರು ಇನ್ನೂ ಪತ್ರಿಕೆಗಳ ಮೇಲೆ ನಂಬಿಕೆ ಇಟ್ಟಿದ್ದಾರೆ. ನಾನೂ ನಂಬಿಕೆ ಇಟ್ಟಿದ್ದೇನೆ ಎಂದರು.

ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ್ ಖಂಡ್ರೆ, ಸಚಿವರುಗಳಾದ ರಹೀಂ ಖಾನ್, ಶರಣ ಪ್ರಕಾಶ್ ಪಾಟೀಲ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು, ಜಿಲ್ಲಾಧ್ಯಕ್ಷರಾದ ಆನಂದ್ ದೇವಪ್ಪ, ಸಮ್ಮೇಳನದ ಪ್ರಧಾನ

3 ನೇ ಪುಟಕ್ಕೆ



ಸುಸಜ್ಜಿತ ಕನ್ವೆನ್ಷನ್ ಸೆಂಟರ್ ಕಟ್ಟಡ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಚಾಲನೆ

ರಾಯಚೂರು ಏಪ್ರಿಲ್ 11

ರಾಯಚೂರು ನಗರದ ಕೃಷಿ ವಿಶ್ವವಿದ್ಯಾಲಯದ ಮೈದಾನದ ಆವರಣದಲ್ಲಿ ಈಗಾಗಲೇ ಕಾಯ್ದಿರಿಸಿದಎರಡು ಎಕರೆ ಜಾಗದಲ್ಲಿ ಸುಮಾರು2000ಕ್ಕೂ ಹೆಚ್ಚು ಆಸನವುಳ್ಳ ಸುಸಜ್ಜಿತವಾದ ಕನ್ವೆನ್ಷನ್ ಸೆಂಟರ್ ನಿರ್ಮಿಸಲು ಕೆ.ಕೆ.ಆರ್.ಡಿ.ಬಿ. ಅಡಿ 40ಕೋಟಿ ರೂ. ಅಂದಾಜು ಮೊತ್ತದಕಟ್ಟಡ ನಿರ್ಮಾಣದ ಭೂಮಿ ಪೂಜೆ ಕಾರ್ಯಕ್ರಮಕ್ಕೆ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಏಪ್ರಿಲ್08ರಬುಧವಾರ ದಂದು ನಗರದ ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್,ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ ಕಾಂದೂ, ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹೊಪಾತ್ರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಷ್ಟು ಗಿರಿ, ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಂ.ಹನುಮಂತಪ್ಪ, ಅಪರ ಜಿಲ್ಲಾಧಿಕಾರಿ ಶಿವಾನಂದ, ಜಿಲ್ಲಾ ಪಂಚಾಯತ ಯೋಜನೆ ಅಧಿಕಾರಿ ಶರಣಬಸವರಾಜ, ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಜಿಲ್ಲಾ ಪಂಚಾಯತ್ ಲೆಕ್ಕಾಧಿಕಾರಿ ವಿಜಯಶಂಕರ್, ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಬಸವನ ಗೌಡಬ್ಯಾಗವಾಟ್, ಮಲ್ಲೇಶ್ ಕೊಲಿಮಿ, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಾದ ವೆಂಕಟೇಶ್ ಗಲಗ, ಅಭಿಯಂತರರಾದ ರಾಘವೇಂದ್ರ, ಮಹೇಶ ಕುಮಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದ ಜಿಲ್ಲಾದ್ಯಕ್ಷರಾಗಿ ರಾಜಶೇಖರ ದಿನ್ನಿ ಅವಿರೋಧ ಆಯ್ಕೆ

ರಾಯಚೂರು.ಏ.11-

ಜಿಲ್ಲಾ ಕೇಂದ್ರದಲ್ಲಿರುವ ಜಿಲ್ಲಾ ಸರ್ಕಾರಿ ನೌಕರರ ಭವನ, ಜಿಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘವನ್ನು ಪುನರ ರಚನೆ ಮಾಡಲಾಗಿದ್ದೂ ಜಿಲ್ಲಾಧ್ಯಕ್ಷರಾಗಿ ನವಲಕಲ್ ಪ್ರೌಢಶಾಲೆಯ ಮು.ಗು. ರಾಜಶೇಖರ ದಿನ್ನಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಈ ಸಭೆಯ ಅಧ್ಯಕ್ಷತೆಯನ್ನು ನಿಕಟಪೂರ್ವ ಅಧ್ಯಕ್ಷರು ಮತ್ತು ವಯೋ ನಿವೃತ್ತಿ ಹೊಂದಿದ ಎಂ ಹೆಚ್ ನಾಯಕ್ ವಹಿಸಿದ್ದರು. ರಾಯಚೂರು ಜಿಲ್ಲೆಯ ಎಲ್ಲಾ ತಾಲೂಕಿನ ಪದಾಧಿಕಾರಿಗಳು ಮತ್ತು ಮುಖ್ಯೋಪಾಧ್ಯಾಯರು ಸಭೆಯಲ್ಲಿ ಹಾಜರಿದ್ದರು.

ಈ ಸಭೆಯಲ್ಲಿ ಸರ್ವ ಸಮ್ಮತ




ಅವಿರೋಧವಾಗಿ ಜಿಲ್ಲಾ ಅಧ್ಯಕ್ಷರಾಗಿ, ರಾಜಶೇಖರ್ ದಿನ್ನಿ, ಜಿಲ್ಲಾ ಗೌರವ ಅಧ್ಯಕ್ಷರಾಗಿ ಗದ್ದಿ ಬಸಪ್ಪ, ಜಿಲ್ಲಾ ಪ್ರಧಾನ ಕಾರ್ಯ ದರ್ಶಿಯಾಗಿ ಶಶಿಕಲಾ ದಿವಾಕ್ರ, ಜಿಲ್ಲಾ ಖಜಾಂಚಿಗಳಾಗಿ ಹೊನಕೆರಪ್ಪ ಗಬ್ಬೂರು. ಉಪಾಧ್ಯಕ್ಷರಾಗಿ ಮಹೇಶ್ ಲಿಂಗಸುಗೂರು. ಸಂಜೀವ್ ಸುಧಾಕರ್ ಮಾನ್ವಿ. ನಿರ್ಮಲ ಸಿಂಧನೂರ್ ಅಯ್ಯನಗೌಡ ಸಿರವಾರ ಆಯ್ಕೆಯಾದರು.

ನಿಕಟಪೂರ್ವ ಅಧ್ಯಕ್ಷರಾದ ಮತ್ತು ವಯೋನಿವೃತ್ತಿಯನ್ನು ಹೊಂದಿದ ಶ್ರೀ ಎಂ ಎಚ್ ನಾಯಕ ಅವರಿಗೆ ಸನ್ಮಾನಿಸಿ, ಗೌರವಿಸಲಾಯಿತು. ರಾಯಚೂರು ಜಿಲ್ಲೆಯ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು ಅವುಗಳಿಗೆ ಪರಿಹಾರ ನೀಡುವ ನಿಟ್ಟನಲ್ಲಿ ಸಂಘವು ಮೇಲಾಧಿಕಾರಿಗಳ ಜೊತೆಯಲ್ಲಿ ಉತ್ತಮ ಬಾಂಧವ್ಯ ಮತ್ತು ಶಾಲೆಯ ಪ್ರಗತಿ ಹಾಗೂ ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣ ಮತ್ತು ಸಂಘಟನೆಯ ಬಗ್ಗೆ ಚರ್ಚೆಯನ್ನು ಮಾಡಲಾಯಿತು.

ಈ ಸಭೆಯಲ್ಲಿ ರಾಯಚೂರು ಜಿಲ್ಲೆಯ ಗೌರವಾಧ್ಯಕ್ಷರಾದಲ ಗದಿ ಬಸಪ್ಪ, ಲಿಂಗಸುಗೂರು ತಾಲೂಕಿನ

3 ನೇ ಪುಟಕ್ಕೆ

ಮದುವೆಯಾಗುತ್ತೇನೆಂದು ನಂಬಿಸಿ ಕೈಕೊಟ್ಟ ಇಂಜಿನಿಯರ್



ರಾಯಚೂರು, ಏ.11

ಪ್ರೀತಿ, ಮದುವೆ ಹೆಸರಿನಲ್ಲಿ ವಂಚನೆ ಮಾಡಿದ ಆರೋಪದ ಮೇಲೆ ಇಂಜಿನಿಯರ್ ವಿರುದ್ಧ ಮಹಿಳೆಯೊಬ್ಬರು ದೂರು ನೀಡಿರುವ ಘಟನೆ ರಾಯಚೂರು () ಜಿಲ್ಲೆಯಲ್ಲಿ ಬೆಳಕಿಗೆ ಬಂದಿದೆ. ದೇವದುರ್ಗ ಮೂಲದ ಮಲ್ಲಿಕಾರ್ಜುನ್ ಎಂಬ ಇಂಜಿನಿಯರ್ ವಿರುದ್ಧ ಮದುವೆಯಾಗುತ್ತೇನೆ ಎಂದು ನಂಬಿಸಿ ಬಲವಂತವಾಗಿ ಲೈಂಗಿಕ ಸಂಪರ್ಕ ಮಾಡಿದ್ದಾನೆಂದು ಅತಿಥಿ ಶಿಕ್ಷಕಿ ಗಂಭೀರ ಆರೋಪ ಮಾಡಿದ್ದಾರೆ.

ಕಾಲೇಜು ದಿನಗಳಿಂದಲೇ ಜೊತೆಯಲ್ಲಿದ್ದ ಮಲ್ಲಿಕಾರ್ಜುನ್ ಮತ್ತು ಮಹಿಳೆ, ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು. ಹೀಗೆ ಸುಮಾರು 7-8 ವರ್ಷಗಳ ಕಾಲ ಪ್ರೇಮ ಸಂಬಂಧದಲ್ಲಿದ್ದು, ಮಂತ್ರಾಲಯ, ಆಲಮಟ್ಟಿ ಡ್ಯಾಂ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಓಡಾಡಿದ್ದರು ಎನ್ನಲಾಗಿದೆ. ಅಷ್ಟೆ ಅಲ್ಲದೆ ಮಹಿಳೆಗೆ ತಾನು ನಿನ್ನನ್ನೇ ಮದುವೆಯಾಗುತ್ತೇನೆಂದು ನಂಬಿಸಿದ್ದ ಮಲ್ಲಿಕಾರ್ಜುನ್, ಹಲವು ಬಾರಿ ಬಲವಂತವಾಗಿ ಲೈಂಗಿಕ ಸಂಪರ್ಕ ಬೆಳೆಸಿದ ಆರೋಪವನ್ನೂ ಶಿಕ್ಷಕಿ ಮಾಡಿದ್ದಾರೆ.

3 ನೇ ಪುಟಕ್ಕೆ

ಮಹಾನಗರ ಪಾಲಿಕೆ ಆಯುಕ್ತ ಜುಬೀನ್ ಮಹಾಪತ್ರ ಅಧ್ಯಕ್ಷತೆಯಲ್ಲಿ ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆ

ರಾಯಚೂರು,ಏ.11-

ಮಹಾನಗರ ಪಾಲಿಕೆ ಆಯುಕ್ತ ಜುಬೀನ್ ಮಹಾಪತ್ರ, ಅವರ ಅಧ್ಯಕ್ಷತೆಯಲ್ಲಿ ಇಂದು ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆ ನಡೆಯಿತು.

ಸಭೆಯಲ್ಲಿ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಯಿತು. ಪೊಲೀಸ್ ಬಂದೋಬಸ್ತ್‌ನೊಂದಿಗೆ ಮೆರವಣಿಗೆ ನಡೆಸಲು ಹಾಗೂ ವಿವಿಧ ಸಾಂಸ್ಕೃತಿಕ ತಂಡಗಳನ್ನು ಕಾರ್ಯಕ್ರಮದಲ್ಲಿ ಭಾಗವಹಿಸಲು ತೀರ್ಮಾನಿಸಲಾಯಿತು. ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ನಗರದ 10 ಸ್ಥಳಗಳಲ್ಲಿ ಬ್ಯಾನರ್ ಅಳವಡಿಸಲು ಸರ್ಕಾರದ ವತಿಯಿಂದ ಸೂಚನೆ ನೀಡಲಾಯಿತು. ಮುಂದಿನ ದಿನಗಳಲ್ಲಿ ಪ್ರಮುಖ ವೃತ್ತಗಳಲ್ಲಿ ಡಿಜಿಟಲ್ ಬೋರ್ಡ್ ಅಳವಡಿಕೆ ಮತ್ತು ಸಿಟಿ ಬಸ್ ನಿಲ್ದಾಣಗಳಲ್ಲಿ ವಿಶೇಷ ವ್ಯವಸ್ಥೆ ಮಾಡಲು ಸಿದ್ಧತೆ ನಡೆದಿದೆ.



''ಅಂಬೇಡ್ಕರ್ ಅವರು ಹೇಳಿದಂತೆ ಸಮಾನತೆಯೇ ನಮ್ಮ ಧ್ಯೇಯ. ನಮಗೆ ಎಲ್ಲಾ ಜಯಂತಿಗಳು ಸಮಾನ. ಅವರ ಮೌಲ್ಯ, ವಿಚಾರಗಳನ್ನು ಜನರಿಗೆ ತಲುಪಿಸಬೇಕು. ಜಯಂತಿಗಳ ಮೂಲಕ ನಮ್ಮ ಸಂಸ್ಕೃತಿ, ಪರಂಪರೆಯನ್ನು ಉಳಿಸೋಣ'' ಎಂದು ಆಯುಕ್ತ ಜುಬೀನ್ ಮಹಾಪುತ್ರ ತಿಳಿಸಿದರು. ಯಾವುದೇ ದ್ವಂದ್ವ ನೀತಿ ಅನುಸರಿಸುತ್ತಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ದಲಿತ ಮುಖಂಡರ ಅಸಮಾಧಾನ: ಸಭೆಯಲ್ಲಿ ಮಾತನಾಡಿದ ದಲಿತ ಮುಖಂಡರು, ''ಜಯಂತಿಗೆ ಪ್ರತಿ ಬಾರಿ ಸಮಾಜ ಕಲ್ಯಾಣ ಇಲಾಖೆಯನ್ನು ಕೇಳಿಕೊಂಡು ಕೆಲಸ ಮಾಡಿಸಿಕೊಳ್ಳುವ ಪರಿಸ್ಥಿತಿ ಇದೆ'' ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರು, ಇನ್ನು ಮುಂದೆ ಇಂತಹ ಸಮಸ್ಯೆಗಳು ವ'ರ'ಕ'ಳಿಸ'ದ'ಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು.

ಜವಾಬ್ದಾರಿ ಹಂಚಿಕೆ: ಜಿಲ್ಲಾಧಿಕಾರಿಗಳ ಆದೇಶದಂತೆ ಜಯಂತಿಯ ಸಂಪೂರ್ಣ ಜವಾಬ್ದಾರಿಯನ್ನು ಕೃಷ್ಣ ಕಟ್ಟಿಮನಿ ಅವರಿಗೆ ವಹಿಸಲಾಗಿದ್ದು, ಪಾಲಿಕೆ ವತಿಯಿಂದ 24/7 ಸಹಕಾರ ನೀಡಲಾಗುವುದು ಎಂದು ತಿಳಿಸಲಾಯಿತು. ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಬ್ಯಾನರ್

3 ನೇ ಪುಟಕ್ಕೆ

ವಸಂತ ಕುಮಾರ ಹೇಳಿಕೆಗೆ ವೀರನಗೌಡ ಲೆಕ್ಕಿಹಾಳ ತಿರುಗೇಟು

ರಾಯಚೂರು,ಏ.11-

ವಿಧಾನಪರಿಷತ್ ಸದಸ್ಯ ಎ. ವಸಂತ ಕುಮಾರ ಅವರು ಖರ್ಗೆ ಕುಟುಂಬವನ್ನು ಮೆಚ್ಚಿಸುವ ಉದ್ದೇಶದಿಂದ ಬಿಜೆಪಿ ನಾಯಕರನ್ನು ಹುಚ್ಚ ನಾಯಿಗಳಿಗೆ ಹೋಲಿಸಿದರೆ ಅವರಿಗೆ ಶೋಭೆ ತರುವುದಿಲ್ಲ ಬಿಜೆಪಿ ನಾಯಕರು ನಿಯತ್ತಿನ ನಾಯಿಗಳಿದಂತೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ ತೀವ್ರವಾಗಿ ಖಂಡಿಸಿದ್ದಾರೆ.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ,

ಬಿಜೆಪಿಗರನ್ನು ನಾಯಿಗಳಿಗೆ ಹೋಲಿಸಿದರೆ, ನಾವು ನಿಯತ್ತಿನ ನಾಯಿಗಳು ಇದ್ದಂತೆ. ಕಾಂಗ್ರೆಸ್‌ನಲ್ಲಿರುವ ಕಳ್ಳತನ ಮತ್ತು ತಪ್ಪುಗಳನ್ನು ಕಂಡಾಗ ಮಾತ್ರ ಬೊಗಳುತ್ತೇವೆ ಎಂದು ತಿರುಗೇಟು ನೀಡಿದರು.



ಎ.ವಸಂತ ಕುಮಾರ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪ್ರಿಯಾಂಕ ಖರ್ಗೆ ಅವರನ್ನು ಸಮರ್ಥಿಸಲು ಈ ರೀತಿಯ ಕೀಳುಮಟ್ಟದ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿದರು.ಇಂತಹ ಓಲೈಕೆ ರಾಜಕಾರಣದಿಂದ ಮಂತ್ರಿ ಸ್ಥಾನ ಪಡೆಯುವ ನಿರೀಕ್ಷೆಯಲ್ಲಿ ಈ ರೀತಿಯ ಮಾತುಗಳನ್ನು ಆಡುತ್ತಿದ್ದಾರೆ ಎಂದು ಟೀಕಿಸಿದರು.ವಸಂತ ಕುಮಾರ ಅವರು ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಕುರಿತು ಮಾತನಾಡುವುದಿಲ್ಲ, ಆದರೆ ಖರ್ಗೆ ಕುಟುಂಬದ ಪರವಾಗಿ ಮಾತ್ರ ನಡೆಸುತ್ತಾರೆ. ಇವರಿಗೆ ಕಾಂಗ್ರೆಸ್ ಪಕ್ಷಕ್ಕಿಂತ ಖರ್ಗೆ ಕುಟುಂಬದ ಪರವಾಗಿದ್ದಾರೆ ಎಂಬುದು ಸ್ಪಷ್ಟವಾದ ನಿಲುವು ಕಾಣುತ್ತಿದೆ. ನಮಾಜ್ ವೇಳೆ ವಿಷಸರ್ಪ ಬಂದರೆ ಹೊಡೆಯಬೇಕು ಎಂಬ ಮಲ್ಲಿಕಾರ್ಜುನ ಖರ್ಗೆ ಅವರು ನೀಡಿದ ಹೇಳಿಕೆಯನ್ನು ಕೂಡ ಲೆಕ್ಕಿಹಾಳ ಖಂಡಿಸಿದರು.ಖರ್ಗೆ ಅವರು ಯಾವಾಗ ಕುರಾನ್ ಓದಿದ್ದಾರೆ? ಯಾವ ಪುಟದಲ್ಲಿ ಇಂತಹ ವಿಷಯ ಇದೆ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು. ರಾಜಕಾರಣದಲ್ಲಿ ಪರಸ್ಪರ ಟೀಕೆ-ಪ್ರತಿಟೀಕೆ ಸಾಮಾನ್ಯವಾದರೂ, ಈ ರೀತಿಯ ಕೀಳುಮಟ್ಟದ ಭಾಷೆ ಬಳಸುವುದು ಸೂಕ್ತವಲ್ಲ ಎಂದು ಅವರು ಅಭಿಪ್ರಾಯಪಟ್ಟರು.ಮಲ್ಲಿಕಾರ್ಜುನ ಖರ್ಗೆ ಅವರು ಹಿರಿಯ ನಾಯಕರು. ಅವರಿಗೆ ವಯಸ್ಸು ಮಾತ್ರವಲ್ಲ, ಅವರ ಮಾತುಗಳಲ್ಲಿ ಕೂಡ ಅದಕ್ಕೆ ತಕ್ಕ ಗಂಭೀರತೆ ಇರಬೇಕು. ಈ ರೀತಿಯ ಹೇಳಿಕೆಗಳು ಅವರಿಗೆ ಶೋಭೆ ತರುವುದಿಲ್ಲ, ಎಂದು ಕಿಡಿಕಾಡಿದರು.ಈ ಸಂದರ್ಭದಲ್ಲಿ ಪಿ.ಯಲ್ಲಪ್ಪ,ವಿ.ಪಿ ರೆಡ್ಡಿ, ಗೋಪಿ ಸೇರಿದಂತೆ ಉಪಸ್ಥಿತರಿದ್ದರು.

ಆತ್ಮ ವಿಶ್ವಾಸದಿಂದ ಸೇವೆ ಸಲ್ಲಿಸಿದಾಗ ಮಾತ್ರ ಸಾಧನೆಯ ಗುರಿ ಮುಟ್ಟಲು ಸಾಧ್ಯ : ಎಸ್.ಪಿ



ರಾಯಚೂರು,ಏ.11-

ನಗರದ ಎಸ್.ಪಿ. ಮೈದಾನದಲ್ಲಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಾದ ಅರಣಾಂಗ್ಸು ಗಿರಿಯವರ ಅಧ್ಯಕ್ಷತೆಯಲ್ಲಿ ನಗರ ಉಪ ವಿಭಾಗಾಧಿಕ್ಷಕರಾದ ಶಾಂತವೀರ ಈ. ಮತ್ತು ಸೈಬರ್ ಕ್ರೈಂ ವಿಭಾಗದ ಡಿ.ವೈ.ಎಸ್.ಪಿ. ವೆಂಕಟೇಶ ಹಚ್. ರವರಿಗೆ ಮುಖ್ಯಮಂತ್ರಿ ಪದಕ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಜಿಲ್ಲಾ ಹೆಚ್ಚುವರಿ ವಿಭಾಗ ಅಧಿಕ್ಷಕರಾದ ಜಿ. ಹರೀಶ, ವಿಭಾಗ ಹೆಚ್.ಎಸ್. ಕುಮಾರ ಸ್ವಾಮಿ, ಡಾ. ಹಂಪಣ್ಣ ಸಜ್ಜನ್ ಸಹಾಯಕ ಆಯುಕ್ತರು, ಸುರೇಶ ವರ್ಮಾ ತಹಶೀಲ್ದಾರವರು ಆಗಮಿಸಿದ್ದರು.

ಗಣೇಶನ ಪ್ರಾರ್ಥನಾ ಗೀತೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಯರಗೇರಾ ಸರ್ಕಲ್ ಇನ್ಸ್‌ಪೆಕ್ಟರ್ ಲಿಂಗಪ್ಪರವರು ಮಾತನಾಡಿದರು.

3 ನೇ ಪುಟಕ್ಕೆ

ಮಹಿಳಾ ದೌರ್ಜನ್ಯ ತಡೆಯಲು ಕಾನೂನು ವ್ಯವಸ್ಥೆ ಬಲಗೊಳ್ಳಬೇಕು-ಸಂಸದ ಸಾಗರ ಖಂಡ್ರೆ



ಬೀದರ, ಏ.11-

ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಕಾನೂನು ವ್ಯವಸ್ಥೆ ಬಲಗೊಳ್ಳಬೇಕು ಮತ್ತು ಅಪರಾಧ ಸಾಬೀತಾಗಿ ಶಿಕ್ಷೆಯಾಗುವ ಪ್ರಮಾಣ ಹೆಚ್ಚಾಗಬೇಕು ಎಂದು ಸಂಸದ ಸಾಗರ ಖಂಡ್ರೆ ಹೇಳಿದರು.

ಅವರು ಶುಕ್ರವಾರ ನಗರದ ಡಾ. ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಜಿಲ್ಲಾ ಪಂಚಾಯತ್, ಬೀದರ ವತಿಯಿಂದ ಆಯೋಜಿಸಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರು ತಮ್ಮ ರಕ್ಷಣೆಗೆ ಆತ್ಮರಕ್ಷಣಾ ಕಲೆಗಳನ್ನು ಕಳೆಯುವ ಮೂಲಕ ಧೈರ್ಯದಿಂದ ಕೆಲಸ ಮಾಡಲು ಮುಂದಾಗಬೇಕು. ಗ್ರಾಮ ಪಂಚಾಯತ್‌ಗಳಲ್ಲಿ ಮಹಿಳೆಯರಿಗೆ ಶೇ. 50% ಮೀಸಲಾತಿಯಿದ್ದರೂ, ಹಲವೆಡೆ ಅವರ ಪರವಾಗಿ ಪುರುಷರೇ (ಪತಿ ಅಥವಾ ಸಂಬಂಧಿಕರು) ಆಡಳಿತ ನಡೆಸುತ್ತಿರುವುದು ಕಂಡುರುತ್ತಿದೆ . ಇದನ್ನು ಬದಲಿಸಿ ಮಹಿಳೆಯರು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವಂತಾಗಬೇಕು. ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ. 33% ಮೀಸಲಾತಿ ನೀಡುವ ಮಸೂದೆಯಿಂದ ಮಹಿಳೆಯರ ಪ್ರಾತಿನಿಧ್ಯವನ್ನು ಹೆಚ್ಚಿಸಲಿದೆ ಎಂದರು.

ರಾಜ್ಯದಲ್ಲಿರುವ ನಮ್ಮ ಸರ್ಕಾರ ? ಭಾರತದಲ್ಲೇ ಮೊದಲ ಬಾರಿಗೆ ತಿಂಗಳಿಗೆ ಒಂದು ದಿನ ಋತುಚಕ್ರದ ರಜೆ ನೀಡುವ ನಿರ್ಧಾರವನ್ನು ಕೈಗೊಂಡಿದೆ. ಎಲ್ಲರು ಸೇರಿ ಮಹಿಳೆಯರ ಅಭಿವೃದ್ಧಿಗೆ ಸೂಕ್ತ ಪ್ರೋತ್ಸಾಹ ನೀಡಬೇಕು. ಇಂದಿರಾ ಗಾಂಧಿಯವರಂತಹ ಶಕ್ತಿಯುತ ಮಹಿಳೆಯರನ್ನು ಆದರ್ಶವಾಗಿಟ್ಟುಕೊಂಡು ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದರು.

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಮಾತನಾಡಿ, ಮಹಿಳೆಯರಿಗೆ ಕೇವಲ ಒಂದು ದಿನ ಗೌರವ ನೀಡುವುದಕ್ಕಿಂತ, ಪ್ರತಿದಿನವೂ ಸಮಾನ ಅವಕಾಶ ಮತ್ತು ಗೌರವ ನೀಡುವ ವಾತಾವರಣ ನಿರ್ಮಾಣವಾಗಬೇಕು. ಮಹಿಳೆ ಮನೆಗೆಲಸದ ಜೊತೆಗೆ ದೇಶವನ್ನು ಆಳುವ ಶಕ್ತಿಯನ್ನು ಹೊಂದಿದ್ದಾಳೆ ಆದ್ದರಿಂದ ಮಹಿಳೆಯರು ತಮ್ಮ ಶಕ್ತಿಯನ್ನು ಅರೆತು ಕೆಲಸ ಮಾಡಿ ಉನ್ನತ ಹುದ್ದೆಗೇರಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ ಮಾತನಾಡಿ, ಗ್ರಾಮೀಣ ಭಾಗದ ಮಹಿಳೆಯರನ್ನು ಸ್ವಸಹಾಯ ಸಂಘಗಳ (ಊಉ) ಮೂಲಕ ಸಂಘಟಿಸಿ, ಅವರಿಗೆ ಉದ್ಯೋಗಾವಕಾಶ ಮತ್ತು ಆರ್ಥಿಕ ಸ್ವತಂತ್ರ ಒದಗಿಸುವಲ್ಲಿ ಈ ಅಭಿಯಾನ ಪ್ರಮುಖ ಪಾತ್ರ ವಹಿಸುತ್ತಿದೆ. ?ಮಹಿಳೆಯರು ಕೇವಲ ಸಾಂಪ್ರದಾಯಿಕ ಕೆಲಸಗಳಿಗೆ ಸೀಮಿತವಾಗದೆ, ಡಿಜಿಟಲ್ ಪಾವತಿಗಳು, ಆನ್‌ಲೈನ್ ಬ್ಯಾಂಕಿಂಗ್ ಮತ್ತು ಸ್ಮಾರ್ಟ್‌ಫೋನ್‌ಗಳ ಬಳಕೆಯನ್ನು ಕಲಿಯುವತ್ತ ಗಮನ ಹರಿಸಬೇಕು. ಜಿಲ್ಲೆಯಲ್ಲಿ ಸುಮಾರು 10 ಸಾವಿರ ಸ್ವಸಹಾಯ ಸಂಘಗಳು ಕಾರ್ಯನಿರ್ವಹಿಸುತ್ತಿವೆ ಎಂದರು.

ಜಿಲ್ಲಾ ಸಾಂಖ್ಯಿಕ ಅಧಿಕಾರಿ ಸುವರ್ಣ ಮಾತನಾಡಿ, ಜಿಲ್ಲಾ ಮಟ್ಟದ ಅಧಿಕಾರಿಗಳಾಗಿ ಮಹಿಳೆಯರನ್ನು ಗುರುತಿಸಿ ವೇದಿಕೆಯ ಮೇಲೆ ಗೌರವಿಸಿರುವುದು ಸಂತೋಷದ ವಿಷಯ. ಇಂತಹ ಕಾರ್ಯಕ್ರಮಗಳಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯ. ಮಹಿಳೆಯರು ಕೇವಲ ಕಚೇರಿ ಕೆಲಸಗಳಲ್ಲದೆ, ಮನೆ, ಮಕ್ಕಳು ಮತ್ತು ಕುಟುಂಬದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಇದು ಹೆಮ್ಮೆಯ ವಿಷಯ ಎಂದ ಅವರು ಏಪ್ರಿಲ್ 15 ರಿಂದ ಏಪ್ರಿಲ್ 30, 2026 ರ ಅವಧಿಯಲ್ಲಿ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ 2026 ಜನಗಣತಿಯ ಮಾಹಿತಿ ಸಂಗ್ರಹಿಸಲಿದ್ದಾರೆ. ಈ ಬಾರಿ ಸಾರ್ವಜನಿಕರು ಆನ್‌ಲೈನ್ ಲಿಂಕ್ ಮೂಲಕ ತಾವಾಗಿಯೇ ಮಾಹಿತಿಯನ್ನು ದಾಖಲಿಸಲು ಅವಕಾಶವಿದೆ ಆದ್ದರಿಂದ ಎಲ್ಲರು ಜನಗಣತಿಯಲ್ಲಿ ಭಾಗವಹಿಸಬೇಕೆಂದರು.

ಕಾರ್ಯಕ್ರಮದಲ್ಲಿ ಅಕ್ಕ ಮಹಾದೇವಿ ಮಹಾವಿದ್ಯಾಲಯದ ಪ್ರಧ್ಯಪಕಿ ಧನಲಕ್ಷ್ಮೀ ಪಾಟೀಲ್ ವಿಶೇಷ ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಅತ್ಯುತ್ತಮ ಒಕ್ಕೂಟಗಳಿಗೆ ಹಾಗೂ ಸ್ವ ಸಹಾಯ ಗುಂಪುಗಳಿಗೆ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ ಪುರಸ್ಕಾರ ಹಾಗೂ ಸ್ವ-ಸಹಾಯ ಗುಂಪು ಪುರಸ್ಕಾರ ಪ್ರಧಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ದೇವಿಕಾ. ಆರ್, ಚಿಟಗುಪ್ಪ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮೀ ಬಿರಾದಾರ್, ಜಿಲ್ಲಾ ಪಂಚಾಯತ್ ಸಹಾಯಕ ನಿರ್ದೇಶಕ ಶಿವಲೀಲಾ, ಯೋಜನಾ ನಿರ್ದೇಶಕ ಸೂರ್ಯಕಾಂತ ಬಿರಾದಾರ್ ಸೇರಿದಂತೆ ಸ್ವಸಹಾಯ ಸಂಘದ ಮಹಿಳೆಯರು ಉಪಸ್ಥಿತರಿದ್ದರು.



ಭ್ರೂಣಲಿಂಗ ಪತ್ತೆ ಹಚ್ಚುವುದು ಶಿಕ್ಷಾರ್ಹ ಅಪರಾಧ; ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ-ಡಿಹೆಚ್‌ಒ

ಬಳ್ಳಾರಿ,ಏ.11-

ಭ್ರೂಣಲಿಂಗ ಪತ್ತೆ ಹಚ್ಚುವುದು ಶಿಕ್ಷಾರ್ಹ ಅಪರಾಧವಾಗಿದ್ದು, ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಪಿಸಿ ಮತ್ತು ಪಿಎನ್‌ಡಿಟಿ ಕಾಯ್ದೆಯ ಜಿಲ್ಲಾ ಸಲಹಾ ಸಮಿತಿ ಮತ್ತು ಜಿಲ್ಲಾ ಮೇಲ್ವಿಚಾರಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹೆಣ್ಣು ಮಗುವಿನ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಭ್ರೂಣಲಿಂಗ ಪತ್ತೆ ಮಾಡುವುದು ಅಥವಾ ಅದಕ್ಕೆ ಪ್ರಚೋದನೆ ನೀಡುವುದು ಕಾನೂನುಬಾಹಿರವಾಗಿದೆ ಎಂದು ಅವರು ತಿಳಿಸಿದರು.

ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ:★

ಜಿಲ್ಲೆಯಲ್ಲಿರುವ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳು ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕಾಲಕಾಲಕ್ಕೆ ತಮ್ಮ ಪರವಾನಗಿಯನ್ನು ನವೀಕರಿಸಿಕೊಳ್ಳಬೇಕು. ಎಲ್ಲಾ ಸೆಂಟರ್ ಗಳು ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ಎಫ್ ಫಾರಂಗಳನ್ನು ತಪ್ಪದೇ ಜಿಲ್ಲಾ ಕಾರ್ಯಾಲಯಕ್ಕೆ ಸಲ್ಲಿಸಬೇಕು. ಹೊಸದಾಗಿ ನೋಂದಣಿ ಮಾಡಿಕೊಳ್ಳುವವರು ಸೂಕ್ತ ಸಮಯದಲ್ಲಿ ಅರ್ಜಿ ಸಲ್ಲಿಸಬೇಕು ಎಂದು ಸೂಚಿಸಿದರು.

ಕಾನೂನು ಉಲ್ಲಂಘನೆಗೆ ಭಾರೀ ದಂಡ ಮತ್ತು ಜೈಲು ಶಿಕ್ಷೆ:

ಲಿಂಗ ಪತ್ತೆ ಜಾಹೀರಾತು ನೀಡಿದಲ್ಲಿ 3 ವರ್ಷ ಜೈಲು ಶಿಕ್ಷೆ ಮತ್ತು ರೂ.10,000 ದಂಡ. ವೈದ್ಯರು ಲಿಂಗ ಪತ್ತೆ ಮಾಡಿದರೆ (1ನೇ ಬಾರಿ) 3 ವರ್ಷ ಜೈಲು ಶಿಕ್ಷೆ ಮತ್ತು ರೂ.10,000 ದಂಡ. ವೈದ್ಯರು 2ನೇ ಬಾರಿ ಲಿಂಗ ಪತ್ತೆ ಮಾಡಿದರೆ 5 ವರ್ಷ ಜೈಲು ಶಿಕ್ಷೆ ಮತ್ತು ರೂ.50,000 ದಂಡ. ಲಿಂಗ ಪತ್ತೆಗೆ ಕುಟುಂಬದವರಿಂದ ಒತ್ತಾಯ ಮಾಡಿದಲ್ಲಿ (1ನೇ ಬಾರಿ) 3 ವರ್ಷ ಜೈಲು ಶಿಕ್ಷೆ ಮತ್ತು ರೂ.50,000 ದಂಡ. ಎರಡನೇ ಬಾರಿ ಮಾಡಿದಲ್ಲಿ 5 ವರ್ಷ ಜೈಲು ಶಿಕ್ಷೆ ಮತ್ತು ರೂ.1 ಲಕ್ಷ ದಂಡ ವಿಧಿಸಲಾಗುತ್ತದೆ. ಹಾಗಾಗಿ ಭ್ರೂಣಲಿಂಗ ಪತ್ತೆ ನಿಷೇಧ ಕಾಯ್ದೆ 1994 ರಡಿ ವಿಧಿಸಲಾಗುವ ಶಿಕ್ಷೆಯು ಕಠಿಣವಾಗಿದ್ದು, ಅಧಿಕಾರಿಗಳು ಸಾರ್ವಜನಿಕರಿಗೆ ಮತ್ತು ವೈದ್ಯಕೀಯ ವಲಯಕ್ಕೆ ಜಾಗೃತಿ ನೀಡಬೇಕು ಎಂದು ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಲ್ಲೆಯಲ್ಲಿನ ಸ್ಕ್ಯಾನಿಂಗ್ ಸೆಂಟರ್‌ಗಳ ಕಾರ್ಯವೈಖರಿ ಮತ್ತು ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವ ಕುರಿತು ಮಹತ್ವದ ಚರ್ಚೆ ನಡೆಸಲಾಯಿತು.

ಈ ವೇಳೆ ಪಿಸಿ ಮತ್ತು ಪಿಎನ್‌ಡಿಟಿ ಕಾಯ್ದೆಯ ಜಿಲ್ಲಾ ಸಲಹಾ ಸಮಿತಿ ಮತ್ತು ಜಿಲ್ಲಾ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷ ಡಾ.ಶಂಭು, ಸದಸ್ಯರಾದ ಜಿಲ್ಲಾ ಜಾರಿ ಅಧಿಕಾರಿ ಡಾ.ವೀರೇಂದ್ರ ಕುಮಾರ್, ಖಾಸಗಿ ರೇಡಿಯಾಲಜಿಸ್ಟ್ ಡಾ.ರಾಘವೇಂದ್ರ, ಜಿಲ್ಲಾ ಆಸ್ಪತ್ರೆಯ ಮಕ್ಕಳ ತಜ್ಞೆ ಡಾ.ಭಾವನ, ಕುರುಗೋಡಿನ ರೇಡಿಯಾಲಜಿಸ್ಟ್ ಡಾ.ರವಿಚಂದ್ರವರ್ಮಾ, ಪಿಸಿ-ಪಿಎನ್‌ಡಿಟಿ ವಿಷಯ ನಿರ್ವಾಹಕರಾದ ಕೆ.ಹೆಚ್.ಗೋಪಾಲ್, ತಿಪ್ಪೇಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಶರಣಕುಮಾರ ಮೋದಿ ಜನ್ಮದಿನ ಪ್ರಯುಕ್ತ ಹಣ್ಣು ಹಂಪಲು ವಿತರಣೆ, ಅನ್ನದಾಸೋಹ ಕಾರ್ಯಕ್ರಮ

ಕಲಬುರಗಿ,ಏ.11-

ನಗರದ ಶ್ರೀ ಶರಣಬಸವೇಶ್ವರ ದೇವಸ್ಥಾನ ಆವರಣದಲ್ಲಿ ಕರ್ನಾಟಕ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯರು, ಮಹಾನಗರ ಪಾಲಿಕೆಯ ಮಾಜಿ ಮಹಾಪೌರರು ಹಾಗೂ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಅಧ್ಯಕ್ಷರಾದ ಶರಣಕುಮಾರ ಮೋದಿ ಅವರ ಜನ್ಮದಿನದ ಅಂಗವಾಗಿ ಶ್ರೀ ಈಶ್ವರ ಖಂಡ್ರೆ ಸಾಬ್ ಅಭಿಮಾನಿ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ದಶವಂತ ಬಿ.ಕಣಮುಸಕರ್ ಅವರ ನೇತೃತ್ವದಲ್ಲಿ ಅನ್ನದಾಸೋಹ ಹಾಗೂ ಹಣ್ಣು ಹಂಪಲು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಸೋಮ ಶೇಖರ ಹಿರೇಮಠ, ಭೀಮಾಶಂಕರ ಮಿಟೇಕಾರ, ತೋಟಯ್ಯ ಸ್ವಾಮಿ, ವಿಠಲ ಹಾಗರಗಿ, ಶೇಖರ ವಿದ್ಯಾನಗರ, ಸಿದ್ದು ಕನಕ, ಚಂದ್ರಶಾ ಗಾಯಕವಾಡ, ಮಲ್ಲಿಕಾರ್ಜುನ ಸೇರಿದಂತೆ ಸಂಘದ ಪದಾಧಿಕಾರಿಗಳು, ಅಭಿಮಾನಿಗಳು ಇದ್ದರು.



ರೋಟರಿ ಸಿಲ್ವರ್ ಸ್ಟಾರ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ

ಬೀದರ್,ಏ.11-

ಬೀದರ್ ನ ರೋಟರಿ ಕ್ಲಬ್ ಆಫ್ ಸಿಲ್ವರ್ ಸ್ಟಾರ್ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಬಿವಿ ಭೂಮರೆಡ್ಡಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜು ಮತ್ತು ಬೀದರ್ ನ ಗುದಗೆ ಆಸ್ಪತ್ರೆಯ ಸಹಯೋ ಗದಲ್ಲಿ ಇಂದು ಬೀದರ್ ನಗರದ ಬಿವಿ ಭೂಮಿ ರೆಡ್ಡಿ ಕಾಲೇಜಿನ ಆವಣದಲ್ಲಿ ಉಚಿತವಾಗಿ ಮಲ್ಟಿ ಸ್ಪೆಶಾಲಿಟಿ ಆರೋಗ್ಯ ತಪಾಸಣಾ ಶಿಬಿರವನ್ನ ಹಮ್ಮಿಕೊಳ್ಳಲಾಯಿತು.

ಸುಮಾರು 500ಕ್ಕೂ ಅಧಿಕ ಜನರು ಶಿಬಿರದಲ್ಲಿ ಭಾಗಿಯಾಗಿದ್ದು, ಬಂದಂತಹ ಸಾರ್ವಜನಿಕರಿಗೆ ಉಚಿತವಾಗಿ ಬಿಪಿ ತಪಾಸಣೆ, ಶುಗರ್ ತಪಾಸಣೆ, ಕಣ್ಣಿನ ತಪಾಸಣೆ ಮಂಡಿ ಹಾಗೂ ಕೈ ಕಾಲು ತಪಾಸಣೆ, ದಂತ ತಪಾಸಣೆಯನ್ನ ಆಯಾ ವಿಭಾಗದ ಪರಿಣಿತ ವೈದ್ಯರು ನಡೆಸಿದರು.

ಇದೇ ವೇಳೆ ರೋಟರಿ ಸಿಲ್ವರ್ ಸ್ಟಾರ್ ಅಧ್ಯಕ್ಷ ಆದಿಶ್ ವಾಲಿ ಮಾತನಾಡಿ, 6ಕ್ಕೂ ಅಧಿಕ ನುರಿತ ತಜ್ಞ ವೈದ್ಯರ ತಂಡದೊಂದಿಗೆ ಇಂದು ಭೂಮರೆಡ್ಡಿ ಕಾಲೇಜಿನಲ್ಲಿ ವಿವಿಧ ಆರೋಗ್ಯ ತಪಾಸಣಾ ಶಿಬಿರವನ್ನ ಹಮ್ಮಿಕೊಳ್ಳಲಾಗಿದ್ದು, ಬೀದರ್ ನಗರ ಹಾಗೂ ಗ್ರಾಮಾಂತರ ಪ್ರದೇಶದ ಜನರು ಬಂದು ಈ ಶಿಬಿರದ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂದರು. ಗುದಗೆ ಆಸ್ಪತ್ರೆಯ ವೈದ್ಯ ಸಚಿನ ಗುದಗೆ ಮಾತನಾಡಿ, ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ, ರೋಟರಿ ಸಿಲ್ವರ್ ಸ್ಟಾರ್ ಹಾಗೂ ನಮ್ಮ ಗುದಗೆ ಆಸ್ಪತ್ರೆಯ ಸಹಯೋಗದಲ್ಲಿ ಸಾರ್ವಜನಿಕರ ಆರೋಗ್ಯಕ್ಕಾಗಿ ಉಚಿತ ಬಹು ವಿಶೇಷ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಈಗಾಗಲೇ ಸಾಕಷ್ಟು ಜನ ಬಂದು ತಮ್ಮ ಕಣ್ಣು, ಹಲ್ಲು , ಮೈ ಕೈ ನೋವು, ಮಂಡಿ ನೋವುವಿನ ತಪಾಸಣೆ ಮಾಡಿಸಿಕೊಳ್ಳುತ್ತಿದ್ದಾರೆ. ತಪಾಸಣೆ ಮಾಡಿಸಿಕೊಂಡ ಸಾರ್ವಜನಿಕರಿಗೆ ಮೆಡಿಸಿನ್ ಗಳನ್ನು ಸಹ ನೀಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ವೈದ್ಯರಾದ ಡಾ. ನಿತಿನ್ ಸಿ ಗುದಗೆ, ಡಾ.ವೈಭವ್ ಭದಭದೇ, ಡಾ. ಶೈಲೇಶ್ ಮಠ್, ಡಾ.ಗೋವಿಂದರಾಜ, ಡಾ. ಸಂಗಮೇಶ್ ವಡಗಾವೆ ಶಿಬಿರದಲ್ಲಿ ಆರೋಗ್ಯ ತಪಾಸಣೆ ನಡೆಸಿದರು.

ವಿಶೇಷಚೇತನರಿಗೆ 2.63 ಕೋಟಿ ರೂ. ಮೊತ್ತದ ಸಾಧನ ಸಲಕರಣೆ ವಿತರಣೆ

ವರ್ಷದಲ್ಲಿ ಬ್ಲೈಂಡ್ ಶಾಲೆ ಲೋಕಾರ್ಪಣೆ -ಪ್ರಿಯಾಂಕ್ ಖರ್ಗೆ



ಕಲಬುರಗಿ,ಏ.11-

ಕಲಬುರಗಿ ನಗರದ ಚಂದ್ರ ಶೇಖರ ಪಾಟೀಲ ಕ್ರೀಡಾಂಗಣದ ಎದುರುಗಡೆ ನಿರ್ಮಾಣದ ಹಂತದಲ್ಲಿರುವ ಅಂಧ ಮಕ್ಕಳ ಶಾಲೆ ಈ ವರ್ಷದ ಅಂತ್ಯಕ್ಕೆ ಕಾಮಗಾರಿ ಪೂರ್ಣ ಗೊಳಿಸಿ ಲೋಕಾರ್ಪಣೆ ಮಾಡಲಾಗುವುದು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾ ಯತ್ ರಾಜ್, ಐ.ಟಿ-ಬಿ.ಟಿ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಶುಕ್ರವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಲ ಅಭಿವೃದ್ಧಿ ಇಲಾಖೆ, ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಹುಡ್ಕೋ ಸಂಸ್ಥೆ, ಅಲಿಮ್ಕೋ ಸಂಸ್ಥೆ ಸಂಯುಕ್ತಾಶ್ರಯದಲ್ಲಿ 2025-26ನೇ ಸಾಲಿನ ಶೇ.5 ಅನುದಾನ, ಡಿ.ಎಂ.ಎಫ್, ಸಿ.ಎಸ್. ಆರ್ ಹಾಗೂ ಇತರೆ ಅನುದಾನದಡಿ ವಿಶೇಷಚೇತನರಿಗೆ ಸುಮಾರು 2.63 ಕೋಟಿ ರೂ. ಮೊತ್ತದಲ್ಲಿ ತ್ರಿಚಕ್ರ ವಾಹನ, ಬುದ್ದಿ ಮಾಂದ್ಯ ಮಕ್ಕಳಿಗೆ ಟಿ.ಎಲ್.ಎಂ ಕಿಟ್, ವೀಲ್ ಚೇರ್, ಬೆನ್ನು ನೋವಿನವರಿಗೆ ಮೆಡಿಕಲ್ ಕಿಟ್, ವಿಶೇಷ ಚೇತನರಿಗೆ ಬ್ರೈಲ್ ಕಿಟ್ ಟೈಪಿಂಗ್, ಶ್ರವಣ ದೋಷ ಯಂತ್ರ ಹಾಗೂ ರೀಡಿಂಗ್ ಯಂತ್ರ, ಟೇಬಲ್, ಬ್ಯಾಟರಿ ಆಪರೇಟೆಡ್ ಮೋಟೋರೈಸಡ್ ಟ್ರೈ ಸೈಕಲ್ ಹಾಗೂ ಇತ್ಯಾದಿ ಸಾಧನ ಸಲಕರಣೆಗಳ ವಿತರಣೆ ಮಾಡಿ ಅವರು ಮಾತನಾಡಿದರು.

60 ವರ್ಷ ಹಳೆಯದಾದ ಅಂಧ ಬಾಲಕ ಶಾಲೆ ಕಟ್ಟಡಕ್ಕೆ ಡಾ.ಮಲ್ಲಿಕಾರ್ಜುನ ಖರ್ಗೆ ಅವರು ಒಮ್ಮೆ ಇದರ ಪುನರ್ ನವೀಕರಣ ಮಾಡಿದು ಬಿಟ್ಟರೆ ಇದೂವರೆಗೆ ಯಾರು ಆಕಡೆ ತಿರುಗಿಯೂ ನೋಡಿಲ್ಲ. ಇದೀಗ ನಮ್ಮ ಸರ್ಕಾರ ಅಂಧ ಮಕ್ಕಳ ಹಿತದೃಷ್ಟಿಯಿಂದ ಕೂಡಲೆ ಶಾಲೆ ಕಾಮಗಾರಿ ಪೂರ್ಣಗೊಳಿಸಲು ನಿರ್ಧರಿಸಿದ್ದೇವೆ ಎಂದರು.

ಹುಟ್ಟಿನಿಂದ ವಿಶೇಷಚೇತನರು ದೈಹಿಕ ಅಂಗವಿಕಲರಿದ್ದರು, ಅವರಲ್ಲಿ ಬದುಕವ ಮತ್ತು ಜೀವನದಲ್ಲಿ ಏನಾದರು ಸಾಧಿಸುವ ಹುಮ್ಮಸ್ಸಿಗೆ ಕೊರತೆ ಇಲ್ಲ. ನವೋದ್ಯಮ ಸ್ಥಾಪಿ ಸಲು ಮುಂದೆ ಬರುವ ಕಂಪನಿಗಳ ಮುಖ್ಯಸ್ಥರನ್ನು ನೋಡಿದಾಗ ಕೆಲವರಲ್ಲಿ ಅಂಗವಿಕಲ ದೋಷಗಳಿ ರುವುದನ್ನು ಕಂಡಿರುವೆ. ಆದರು ಅವರು ಛಲ ಬಿಡದೆ ಜೀವನದಲ್ಲಿ ಮುನ್ನುಗ್ಗುತ್ತಿದ್ದಾರೆ. ಸರ್ಕಾರದ ಆರ್ಥಿಕ ಸಹಾಯ ಪಡೆದು ಸ್ವಾಭಿಮಾನದ ಜೀವನ ನಡೆಸುತ್ತಿದ್ದಾರೆ. ನನ್ನ ಇಲಾಖೆಯಿಂದನೆ 30-35 ಲಕ್ಷ ರೂ. ವರೆಗೆ ನವೋದ್ಯಮಕ್ಕೆ ಸಹಾಯಧನ ನೀಡಿದ್ದೇನೆ. ಇದರಿಂದ ವಿಕಲಚೇತನರೂ ಕೂಡಾ ಆರ್ಥಿಕವಾಗಿ ಸಬಲರಾಗುತ್ತಾರೆ. ಅವಕಾಶ ವಂಚಿತರಿಗೆ ಅವಕಾಶ ಕಲ್ಪಿಸುವ ಮಾತೃ ಹೃದಯ, ಸಹಾನುಭೂತಿ ಆಳುವ ಸರ್ಕಾರಕ್ಕೆ ಇರಬೇಕು, ಅದು ನಮ್ಮ ಸರ್ಕಾರಕ್ಕಿದೆ ಎಂದರು.

ವಿಶೇಷಚೇತನರಿಗೆ ಕೇವಲ ತ್ರಿಚಕ್ರ ವಾಹನ, ಸಾಧನ ಸಲಕರಣೆ ಕೊಟ್ಟರೆ ಸಾಲದು. ವಿಶೇಷಚೇತನರನ್ನು ಸಮಾಜದ ಮುಖ್ಯ ವಾಹಿನಿಗೆ ತಂದು ಅವರು ಸಹ ಇತರರಂತೆ ಸ್ವಾಭಿಮಾನದ ಬದುಕು ಸಾಗಿಸಲು ಮತ್ತು ಆರ್ಥಿಕ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಅವರಿಗೆ ಕೌಶಲ್ಯ ಶಿಕ್ಷಣ, ತರಬೇತಿ ನೀಡುವ ಅಗತ್ಯವಿದೆ. ಹೀಗಾಗಿ ಐ.ಟಿ.-ಬಿ.ಟಿ. ಇಲಾಖೆಯು ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ವಿಶೇಷಚೇತನರಿಗೆ ಕೌಶಲ್ಯ ಶಿಕ್ಷಣ ನೀಡಲು ಸೆಂಟರ್ ಆಫ್ ಎಕ್ಸಿಲೆನ್ಸ್ ಆಫ್ ಅಸಿಸ್ಟಿವ್ ಟೆಕ್ನಾಲೋಜಿ ಸ್ಥಾಪಿಸಲು ಮುಂದಾಗಿದ್ದು, ಅದಕ್ಕೆ ಕಲಬುರಗಿಯಲ್ಲಿ ಮೊದಲ ಪ್ರಾಯೋಗಿಕವಾಗಿ ಆರಂಭಿಲಾಗುವುದು, ಇದಕ್ಕೆ ವಿಕಲಚೇತನ ಇಲಾಖೆ ಮುಂದಾಗಬೇಕು ಎಂದರು.

ಡಿಸೇಬಲ್ ಡೇ ಕೇರ್ ಆರಂಭ: ಡಿಸೇಬಲ್ ಮಕ್ಕಳನ್ನು ನೋಡಿಕೊಳ್ಳಲೆಂದೆ ಕಲಬುರಗಿಯಲ್ಲಿ ಡಿಸೇಬಲ್ ಡೇ ಕೇರ್ ಸೆಂಟರ್ ತೆರೆಯಲು ನಿರ್ಧರಿಸಿದ್ದು, ಈಗಾಗಲೆ ಭೂಮಿ ಗುರುತಿಸಿದ್ದು, ಕಟ್ಟಡದ ನೀಲಿ ನಕ್ಷೆ ಸಿದ್ದಪಡಿಸಲಾಗಿದೆ. ಮುಂದಿನ ಒಂದು ವರ್ಷದಲ್ಲಿ ಇದು ತಲೆ ಎತ್ತಲಿದೆ. ಇದರಿಂದ ಪೋಷಕರು ವಿಶೇಷಚೇತನ ಮಕ್ಕಳನ್ನು ಇಲ್ಲಿ ಬಿಟ್ಟು ತಮ್ಮ ದೈನಂದಿನ ಕೆಸಲಕ್ಕೆ ಹೋಗಬಹುದು. ಮಕ್ಕಳನ್ನು ನೋಡಲು ಇಲ್ಲಿ ಕೇರ್ ಟೇರ್ಸ್ ಸಹ ಇರಲಿದ್ದಾರೆ. ನಮ್ಮದು ಮಾತೃ ಹೃದಯದ ಸರ್ಕಾರ, ಪ್ರತಿಯೊಬ್ಬರ ಬಗ್ಗೆ ಕಾಳಜಿ ವಹಿಸುತ್ತದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಒತ್ತಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಮಾತನಾಡಿ ತಮ್ಮ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿ ಯಲ್ಲಿ ಕಳೆದ ವರ್ಷ 50 ತ್ರಿಚಕ್ರ ವಾಹನ ವಿತರಿಸಲಾಗಿತ್ತು. ಇಂದಿಲ್ಲಿ ಪುನ: 50 ವಾಹನಗಳನ್ನು ಡಿ.ಎಂ. ಎಫ್ ಅನುದಾಡಿ ವಿತರಿಸಲಾಗು ತ್ತಿದೆ. ಪಂಚ ಗ್ಯಾರಂಟಿ ಯೋಜನೆಗಳ ಜೊತೆ ಜೊತೆಗೆ ಸರ್ವ ಜನಾಂಗದ ಸರ್ವಾಂಗೀಣ ಅಭಿವೃದ್ಧಿಗೆ ನಮ್ಮ ಸರ್ಕಾರ ಶ್ರಮಿಸುತ್ತಿದೆ. ಶಿಕ್ಷಣ, ಆರೋಗ್ಯ, ಕ್ರೀಡಗೆ ಹೆಚ್ಚಿನ ಒತ್ತು ನೀಡಿದೆ. ಇಂದಿಲ್ಲಿ ವಸತಿ ನಿಲಯ ಉದ್ಘಾಟನೆ ಮಾಡಲಾಗುತ್ತಿದೆ. ಕ್ಷೇತ್ರದ ಹಡಗಿಲ ಹಾರುತಿ ಗ್ರಾಮದಲ್ಲಿ 30 ಕೋಟಿ ರೂ. ವೆಚ್ಚದಲ್ಲಿ ಕ್ರೀಡಾ ನಗರಿ ನಿರ್ಮಿಸಲಾಗುತ್ತಿದೆ. ಇದಲ್ಲದೆ ಕಲಬುರಗಿ ನಗರದಲ್ಲಿ ಮಹಿಳೆಯರಿಗೆ ಪ್ರತ್ಯೇಕ 30 ಕೋಟಿ ರೂ. ವೆಚ್ಚದಲ್ಲಿ ಸ್ಟೇಡಿಯಂ ಸಹ ಸ್ಥಾಪಿಸಲಾಗುತ್ತಿದೆ ಎಂದರು.

ಕರ್ನಾಟಕ ರೇಷ್ಮೆ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಕಲಬುರಗಿ ಉತ್ತರ ಶಾಸಕಿ ಕನೀಜ್ ಫಾತಿಮಾ, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಕಲಬುರಗಿ ಮಹಾನಗರ ಪಾಲಿಕೆ ಮೇಯರ್ ವರ್ಷಾ ರಾಜೀವ ಜಾನೆ, ಉಪ ಮೇಯರ್ ತೃಪ್ತಿ ಎಸ್. ಅಲ್ಲದ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಡಿ.ಸಿ. ಬಿ.ಫೌಜಿಯಾ ತರನ್ನುಮ್, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ವಿಕಲಚೇತನರ ಕಲ್ಯಾಣಾಧಿಕಾರಿ ಸಾಧಿಕ ಹುಸೇನ್ ಸೇರಿದಂತೆ ಮತ್ತಿತರು ಇದ್ದರು.

ಸಚಿವ ಪ್ರಿಯಾಂಕ್ ಖರ್ಗೆ ಅವರಿಂದ ಕಲಬುರಗಿ ಪಾಲಿಕೆಯ 6.07 ಕೋಟಿ ರೂ. ಮೊತ್ತದ ಸ್ವಚ್ಛತಾ ವಾಹನಗಳು ಲೋಕಾರ್ಪಣೆ

ಕಲಬುರಗಿ,ಏ.11-


ಕಲಬುರಗಿ ಮಹಾನಗರ ಪಾಲಿಕೆ ವತಿಯಿಂದ ನಗರದ ಸ್ವಚ್ಛತೆಗೆ ವಿವಿಧ ಅನುದಾನಗಳಡಿ ಒಟ್ಟು 607.37 ಲಕ್ಷ ರೂ. ಮೊತ್ತದಲ್ಲಿ ಖರೀದಿಸಲಾದ ವಾಹನ ಯಂತ್ರೋಪಕರಣಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಶುಕ್ರವಾರ ಡಿ.ಡಿ. ಕಚೇರಿ ಆವರಣದಲ್ಲಿ ಲೋಕಾರ್ಪಣೆ ಮಾಡಿದರು.

ಎಸ್.ಬಿ.ಎಂ-1.0 ಯೋಜನೆಯಡಿ 363.10 ಲಕ್ಷ ರೂ,. ವೆಚ್ಚದಲ್ಲಿ ಖರೀದಿಸಿದ 32 ಆಟೋ ಟಿಪ್ಪರ್, ಎಸ್.ಬಿ.ಎಂ.2.0 ಯೋಜನೆಯಡಿ 120.25 ಲಕ್ಷ ರೂ. ವೆಚ್ಚದಲ್ಲಿ ಖರೀದಿಸಿದ 03 ಫ್ರಂಟ್ ಎಂಡ್ ಬ್ಯಾಕ್ ಹೋ ಲೋಡರ್, 15ನೇ ಹಣಕಾಸು ಯೋಜನೆಯಡಿ 74.03 ಲಕ್ಷ ರೂ. ವೆಚ್ಚದಲ್ಲಿ 07 ಟ್ರ್ಯಾಕ್ಟರ್, 6 ಟ್ರೈಲರ್ ಹಾಗೂ 2 ಗಾರ್ಬೇಜ್ ಗ್ಯಾಬರ್ ವಾಹನಗಳು ಸ್ವಚ್ಛತಾ ಕಾರ್ಯಕ್ಕೆ ಮುಕ್ತಗೊಳಿಸಲಾಯಿತು.



ಕರ್ನಾಟಕ ರೇಷ್ಮೆ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಕಲಬುರಗಿ ಉತ್ತರ ಶಾಸಕಿ ಕನೀಜ್ ಫಾತಿಮಾ, ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಕಲಬುರಗಿ ಮಹಾನಗರ ಪಾಲಿಕೆ ಮೇಯರ್ ವರ್ಷಾ ರಾಜೀವ ಜಾನೆ, ಉಪ ಮೇಯರ್ ತೃಪ್ತಿ ಎಸ್. ಅಲ್ಲದ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಡಿ.ಸಿ. ಬಿ.ಫೌಜಿಯಾ ತರನ್ನುಮ್, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಸೇರಿದಂತೆ ಪಾಲಿಕೆಯ ಸ್ಥಾಯಿ ಸಮಿತಿ ಅಧ್ಯಕ್ಷರು, ಸದಸ್ಯರು ಇದ್ದರು.

ಕೆಕೆಸಿಸಿಐ ವಜ್ರಮಹೋತ್ಸವಕ್ಕೆ ಸಜ್ಜು: ವಿಮಾನ ಸೇವೆ ಪುನರಾರಂಭಕ್ಕೆ ಭರವಸೆ



ಕಲಬುರಗಿ,ಏ.11-

ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಕೆಕೆಸಿಸಿಐ) ತನ್ನ 60 ವರ್ಷಗಳ ಪಯಣವನ್ನು ಅವಿಸ್ಮರಣೀಯವಾಗಿಸಲು ನವೆಂಬರ್ 27, 28 ಮತ್ತು 29ರಂದು ವಜ್ರಮಹೋತ್ಸವ ಆಚರಿಸುವ ನಿಮಿತ್ತವಾಗಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸಂಸ್ಥೆಯ ಅಧ್ಯಕ್ಷ ಶರಣಬಸಪ್ಪ ಪಪ್ಪಾ ಅವರ ನೇತೃತ್ವದಲ್ಲಿ ದೆಹಲಿಯಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ಭೇಟಿಯಾಗಿ ಮಹತ್ವದ ವಿಚಾರಗಳನ್ನು ಚರ್ಚಿಸಿತು.

ಕಲಬುರಗಿ ವಿಮಾನ ಸೇವೆ ಪುನರಾರಂಭಿಸುವುದು, ಪಿಎಂ ಮಿತ್ರ ಮೆಗಾ ಟೆಕ್ಸ್ಟೈಲ್ ಪಾರ್ಕ್ ಕಾಮಗಾರಿಯನ್ನು ತ್ವರಿತಗೊಳಿಸುವುದು ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳ ಬಗ್ಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಸಚಿವರು ತಕ್ಷಣವೇ ನಾಗರಿಕ ವಿಮಾನಯಾನ ಸಚಿವರಾದ ಕಿಂಜಾರಪು ರಾಮ್ಮೋಹನ್ ನಾಯುಡು ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ವಿಷಯ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಒಂದು ತಿಂಗಳೊಳಗೆ ಕಲಬುರಗಿ ವಿಮಾನ ನಿಲ್ದಾಣದಿಂದ ವಿಮಾನ ಸೇವೆಯನ್ನು ಪುನರಾರಂಭಿಸಲಾಗುವುದು ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಪಿಎಂ ಮಿತ್ರ ಮೆಗಾ ಟೆಕ್ಸ್ಟೈಲ್ ಪಾರ್ಕ್ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಕೇಂದ್ರ ಸಂಪುಟ ಮಟ್ಟದಲ್ಲಿ ಚರ್ಚಿಸಿ ತ್ವರಿತ ಕ್ರಮ ಕೈಗೊಳ್ಳುವುದಾಗಿ ಪ್ರಹ್ಲಾದ್ ಜೋಶಿ ಆಶ್ವಾಸನೆ ನೀಡಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರಾದ ಸಂತೋಷ ಸುರೇಶ್ ನಂದ್ಯಾಲ್ ಮತ್ತು ಸಂಪತ್ ವಿ ಇದ್ದರು.

ಒಂದನೇಯ ಪುಟದಿಂದ

ಊಹಾ ಪತ್ರಿಕೋದ್ಯಮ ಅತ್ಯಂತ ಅಪಾಯಕಾರಿ : ಸಿಎಂ

ಭಾಷಣಕಾರರಾಗಿರುವ ಹಿರಿಯ ಸಂಪಾದಕರಾದ ವಿಶ್ವೇಶ್ವರ ಭಟ್, ಸಂಸದರಾದ ಸಾಗರ್ ಖಂಡ್ರೆ, ಮಾಜಿ ಸಚಿವರಾದ ರಾಜಶೇಖರ್ ಪಾಟೀಲ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸೋಮಣ್ಣ ಬೇವಿನಮರದ್ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಹಾರಕುಡ ಹಿರೇಮಠ ಸಂಸ್ಥಾನದ ಡಾ.ಚನ್ನವೀರ ಶಿವಾಚಾರ್ಯರು, ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದೇವರು ಇವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪತ್ರಕರ್ತರ ಸಂಘದ ರಾಜ್ಯ ಮತ್ತು ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದ ಜಿಲ್ಲಾಧ್ಯಕ್ಷರಾಗಿ ರಾಜಶೇಖರ ದಿನ್ನಿ ಅವಿರೋಧ ಆಯ್ಕೆ

ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷರಾದ ಶರಣೇಗೌಡ, ದೇವದುರ್ಗ ತಾಲೂಕಿನ ವನಕೇರಪ್ಪ ಗಬ್ಬೂರು ಮಾನ್ವಿ ತಾಲೂಕಿನ ಸಂಜೀವ್ ಸುಧಾಕರ್ , ಮಸ್ಕಿ ತಾಲೂಕಿನ ಸುಭಾಸ್ ಸಿಂಗ್,ಯ ವಿರೂಪಾಕ್ಷಪ್ಪ ಜಗದೀಶ್, ಶಂಕ್ರಪ್ಪ ಸಕ್ರಿ,ತಮ್ಮಣ್ಣ, ರಾಮಾದೇವಿ, ಪದ್ಮಜಾ, ಸುಜಾತ ರಾಜೇಂದ್ರ ಶಾ, ಕೃಷ್ಣ ಮೂಕನಗೌಡ ಪೊಲೀಸ್ ಪಾಟೀಲ್, ವೀರೇಶ್ ಅಂಗಡಿ ಉಪಸ್ಥಿತರಿದ್ದರು.

ಮದುವೆಯಾಗುತ್ತೇನೆಂದು ನಂಬಿಸಿ ಕೈಕೊಟ್ಟ ಇಂಜಿನಿಯರ್

ಇಷ್ಟೆಲ್ಲ ಆದ ಬಳಿಕ ಈಗ ಇಬ್ಬರೂ ಬೇರೆ ಬೇರೆ ಜಾತಿಯವರೆಂದು ಸಬೂಬು ಹೇಳಿದ ಇಂಜಿನಿಯರ್, ಇನ್ನೂ ಹತ್ತು ಹಲವು ಕುಂಟು ನೆಪಗಳನ್ನು ಹೇಳಿ ಮದುವೆಯಾಗಲು ನಿರಾಕರಿಸಿದ್ದಾನೆ ಎಂದು ಸಂತ್ರಸ್ತೆ ಆರೋಪಿಸಿದ್ದಾರೆ. ನ್ಯಾಯಕ್ಕಾಗಿ ಮಹಿಳೆ ಪೊಲೀಸ್ ಠಾಣೆ ಮೆಟ್ಟಿಲೇರಿದ್ದು, ಫೋಟೋ, ಆಡಿಯೋ, ವಿಡಿಯೋ ಹಾಗೂ ಮೆಸೇಜ್‌ಗಳೊಂದಿಗೆ ದೂರು ಸಲ್ಲಿಸಿದ್ದಾರೆ. ಸದ್ಯ ರಾಯಚೂರು ಮಹಿಳಾ ಠಾಣೆಯಲ್ಲಿ ಮಲ್ಲಿಕಾರ್ಜುನ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಈ ಕುರಿತು ರಾಯಚೂರು ಎಸ್ ಪಿ ಅರುಣಾಂಗ್ಷು ಗಿರಿ ಪ್ರತಿಕ್ರಿಯಿಸಿ, ಮಹಿಳೆ ನೀಡಿದ ದೂರಿನ ಆಧಾರದ ಮೇಲೆ ತನಿಖೆ ನಡೆಯುತ್ತಿದೆ. 7-8 ವರ್ಷಗಳ ಸಂಬಂಧದ ಬಗ್ಗೆ ವಿವರಗಳ ಪರಿಶೀಲನೆ ನಡೆಯುತ್ತಿದ್ದು, ಸತ್ಯಾಸತ್ಯತೆ ಆಧರಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಮಹಾನಗರ ಪಾಲಿಕೆ ಆಯುಕ್ತ ಜುಬೀನ್ ಮಹಾಪತ್ರ ಅಧ್ಯಕ್ಷತೆಯಲ್ಲಿ ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆ

ಅಳವಡಿಸಲು ಕೆ.ಇ. ಕುಮಾರ್ ಅವರು ಮನವಿ ಸಲ್ಲಿಸಿದರು.

''ಅಧಿಕಾರಿಗಳು ಸಂವಿಧಾನದ ಮೇಲೆ ಪ್ರಮಾಣ ಮಾಡಿ ಬಂದವರು, ಅವರಿಗೆ ಪ್ರಾಮುಖ್ಯತೆ ಇದೆ. ರಾಯಚೂರು ಉತ್ಸವದ ಮಾದರಿಯಲ್ಲಿ ಜಯಂತಿಯನ್ನು ಆಚರಿಸೋಣ'' ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಸಭೆಯಲ್ಲಿ ಡಿವೈಎಸ್ಪಿ ಕುಮಾರ್ ಸ್ವಾಮಿ, ಹೆಚ್ಚುವರಿ ಎಸ್‌ಪಿ ಶಾಂತವೀರ, ಸಂತೋಷ ರಾಣಿ, ಮಲ್ಲಿಕಾರ್ಜುನ್, ಬಸವರಾಜ್ ಹೆಬ್ಬಾಳ ಸೇರಿದಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ವಿವಿಧ ಸಂಘಟನೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಸಮಾಜದ ಮುಖಂಡರು ಹಾಗೂ ಅಂಬೇಡ್ಕರ್ ಅನುಯಾಯಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು. ಎಲ್ಲರಿಗೂ ಸ್ವಾಗತ ಕೋರಲಾಯಿತು.

ಆತ್ಮ ವಿಶ್ವಾಸದಿಂದ ಸೇವೆ ಸಲ್ಲಿಸಿದಾಗ ಮಾತ್ರ ಸಾಧನೆಯ ಗುರಿ ಮುಟ್ಟಲು ಸಾಧ್ಯ : ಎಸ್.ಪಿ

ನಂತರ ಮುಖ್ಯಮಂತ್ರಿ ಪದಕ ಪಡೆದ ಡಿ.ವೈ.ಎಸ್.ಪಿ. ಶಾಂತ ವೀರ ಈ. ಹಾಗೂ ದಂಪತಿಗಳಿಗೆ ಎಸ್.ಪಿ. ಅರಣಾಂಗ್ಷು ಗಿರಿಯವರು ಹಾಗೂ ಜಿ. ಹರೀಶ, ಹೆಚ್.ಎಸ್. ಕುಮಾರ ಸ್ವಾಮಿ, ಡಾ. ಹಂಪಣ್ಣ ಸಜ್ಜನ, ಸುರೇಶ ವರ್ಮಾರವರು ಸೇರಿ ವಿಶೇಷವಾಗಿ ಸನ್ಮಾನಿಸಿ ಗೌರವಿಸಿದರು, ನಂತರ ಇನ್ನುಳಿದ ಇಲಾಖೆಗಳಿಂದ ಹಾಗೂ ಅಭಿಮಾನಿ ಬಳಗದವರಿಂದಲೂ ಪ್ರಶಸ್ತಿ ಪಡೆದ ದಂಪತಿಗಳಿಗೆ ಸನ್ಮಾನಿಸಿ ಗೌರವಿಸಿ ದರು, ಮುಖ್ಯಮಂತ್ರಿ ಪದಕ ಪಡೆದ ಸೈಬರ್ ಕ್ರೈಂ ವಿಭಾಗದ ವೆಂಕಟೇಶ ಹೆಚ್. ರವರು ತಮ್ಮ ಇಲಾಖೆಯ ಸೇವೆಯ ನಿಮಿತ್ಯ ಬೇರೆ ಕಡೆಗೆ ತೆರಳಿ ದ್ದರಿಂದ ಅವರ ಅನುಪಸ್ಥಿಯಲ್ಲಿ ಕಾರ್ಯಕ್ರಮವು ಜರುಗಿತು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ್ದ ಜಿಲ್ಲಾ ಪೋಲಿಸ ವರಿಷ್ಠಾಧಿ ಕಾರಿಗಳಾದ ಅರಣಾಂಗ್ಷು ಗಿರಿಯ ವರು ಮಾತನಾಡಿ ಮುಖ್ಯಮಂತ್ರಿ ಪದಕ ಪಡೆದ ಇಬ್ಬರು ಅಧಿಕಾರಿ ಗಳಿಗೆ ಹೃದಯ ಪೂರ್ವಕ ಅಭಿನಂ ದನೆಗಳು, ಇಲಾಖೆಯಲ್ಲಿ ತಮ್ಮ ಸೇವೆಯನ್ನು ನಿಷ್ಠೆಯಿಂದ ಸಲ್ಲಿಸುತ್ತಾರೋ ಅವರಿಗೆ ಪ್ರಶಸ್ತಿ ಪದಕಗಳು ಲಭಿಸುತ್ತವೆ, ಈಗ ಶಾಂತವೀರ ಮತ್ತು ವೆಂಕಟೇಶರವರಿಗೆ ಪದಕ ಬಂದಿದ್ದು ಇಲಾಖೆಗೆ ತುಂಬಾ ಗೌರವ ತಂದಿದೆ ಎಂದು ಹೇಳಿದರು, ಜಿಲ್ಲೆಯಲ್ಲಿ ಇನ್ನೂ ಸಾಕಸ್ಟು ಸೇವೆ ಸಲ್ಲಿಸುವ ಜವಾಬ್ದಾರಿಗಳಿವೆ ಅದಕ್ಕೆಲ್ಲ ಇಲಾಖೆಯ ಸರ್ವರೂ ಸನ್ನಧರಾಗಿರಬೇಕಾಗುತ್ತೆ ಎಂದು ಹೇಳಿದರು.

ನಂತರ ಅಡಿಷನಲ್ ಎಸ್ಪಿ ಕುಮಾರ ಸ್ವಾಮಿ ಮಾತನಾಡಿ ಇಲಾಖೆಯಲ್ಲಿ ನಿಷ್ಠೆ ಪ್ರಾಮಾಣಿಕತೆಯಿಂದ ತಮ್ಮ ಸೇವೆ ಸಲ್ಲಿಸಿದಾಗ ಮಾತ್ರ ಒಬ್ಬ ವ್ಯಕ್ತಿ ಗುರಿ ಮುಟ್ಟಲು ಸಾಧ್ಯ ಅದರಂತೆ ಉಳಿದ ಅಧಿಕಾರಿಗಳು ತಮ್ಮ ಪ್ರಯತ್ನ ಮಾಡುತ್ತಿರಬೇಕು ಎಂದು ಹೇಳಿದರು.

ನಂತರ ಸನ್ಮಾನ ಸ್ವೀಕರಿಸಿ ಮಾತನಾಡಿದ ಡಿ.ವೈ.ಎಸ್.ಪಿ. ಶಾಂತವೀರ ಈ. ಯವರು ನನಗೆ ಮುಖ್ಯಮಂತ್ರಿ ಪದಕ ಲಭಿಸಲು ಸಹಾಯ ಸಹಕಾರ ನೀಡಿದ ಎಸ್.ಪಿ. ರವರಿಗೆ, ಅಡಿಷನಲ್ ಎಸ್.ಪಿ.ರವರಿಗೆ ಜಿ. ಹರೀಶ ಸಾಹೇಬರಿಗೆ ಇನ್ನೂಳಿದ ಹಿರಿಯ ಅಧಿಕಾರಿಗಳಿಗೆ ನನ್ನ ಹೃದಯ ಪೂರ್ವ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ, ಪದಕ ನನಗೆ ಬಂದಿದೆ ಎಂದರೆ ಇದು ನನ್ನೊಬ್ಬನ ಸಾಧನೆ ಇರುವುದಿಲ್ಲ ತಮ್ಮೆಲ್ಲರ ಶ್ರಮ ನಿಷ್ಕಲ್ಮಷವಾದ ಸೇವೆ ಇದ್ದುದರಿಂದ ನನಗೆ ದೊರೆತಿದೆ, ಮುಖ್ಯಮಂತ್ರಿ ಪದಕವನ್ನು ಪಡೆದ ನನಗೆ ಇನ್ನೂ ಹೆಚ್ಚಿನ ಜವಾಬ್ದಾರಿ ವಹಿಸಿದಂತಾಗಿದೆ, ಪದಕ್ಕೆ ಯಾವ ಚುತಿಯೂ ಬಾರದಂತೆ ನಾನು ಸೇವೆ ಸಲ್ಲಿಸುತ್ತೇನೆ, ಈ ಪದಕವನ್ನು ನನ್ನ ಇಲಾಖೆಗೆ ಅರ್ಪಿಸುತ್ತೇನೆ ಎಂದು ಹೇಳಿದರು.

ಈ ಒಂದು ಅಭಿನಂದನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಪದಕ ಪಡೆದ ನನ್ನ ಆತ್ಮೀಯ ಸ್ನೇಹಿತ ವೆಂಕಟೇಶ ಬೇರೆ ಕಡೆ ತಮ್ಮ ಕರ್ತವ್ಯದ ನಿಮಿತ್ಯ ತೆರಳಿದ್ದು ಅವರು ಇಲ್ಲದೇ ಇರುವುದು ಬೇಜಾರಿಗಿದೆ, ಈ ಕಾರ್ಯಕ್ರಮವನ್ನು ಆಯೋಜನೆ ಮಾಡಿದ ಸರ್ವ ಹಿರಿಯ ಅಧಿಕಾರಿಗಳಿಗೆ ಹಾಗೂ ಪೋಲಿಸ ಇಲಾಖೆಯ ಸರ್ವರಿಗೂ ನನ್ನ ಮತ್ತು ನನ್ನ ಕುಟುಂಬದ ಪರವಾಗಿ ಹೃದಯ ಪೂರ್ವ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸದಾರ ಬಜಾರ ಠಾಣೆ ಸಿ.ಪಿ.ಐ. ಉಮೇಶ ಕಾಂಬ್ಳೆ, ಪಶ್ಚಿಮ ಠಾಣೆ ಸಿ.ಪಿ.ಐ. ನಾಗರಾಜ ಮೇಕಾ, ಪಶ್ಚಿಮ ಠಾಣೆ ಪಿ.ಎಸ್.ಐ. ಮಂಜುನಾಥ, ನೇತಾಜಿ ನಗರ ಠಾಣೆ ಪಿ.ಎಸ್.ಐ. ಬಸವರಾಜ, ಡಿ.ಎ.ಆರ್. ಪರಮಾನಂದ ಗೋಡ್ಕೆ, ಗ್ರಾಮೀಣ ಪಿ.ಎಸ್.ಐ. ಪ್ರಕಾಶ ಡಂಬಳ, ಎ.ಎಸ್.ಐ. ಬಸವರಾಜ ಸ್ವಾಮಿ ಯರಡೋಣ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣ, ಜಿಲ್ಲಾ ಕಾರಾಗೃಹದ ಅಧಿಕ್ಷಕರಾದ ಅನಿತಾ ಹಿರೇಮನಿ, ಪೋಲಿಸ ಇಲಾಖೆಯ ಸರ್ವ ಹಿರಿಯ ಕಿರಿಯ ಅಧಿಕಾರಿಗಳು, ಸರ್ವ ಸಿಬ್ಬಂಧಿ ವರ್ಗದವರು ಮತ್ತು ಅಭಿಮಾನಿಗಳು, ಎಡೆದೊರೆ ಫಿಲ್ಮ ಪ್ರೊಡಕ್ಷನ್ ಭಿಕ್ಷುಂ ಚಿತ್ರ ತಂಡದವರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕನ್ನಡದ ಹಿರಿಯ ನಟ ಅಶೋಕ್‌ರಿಗೆ ಕಲಾ ಸಂಕುಲ ಸಂಸ್ಥೆಯಿಂದ ಸನ್ಮಾನ

ರಾಯಚೂರು ಏ.10.

ಕನ್ನಡ ಚಲನಚಿತ್ರ ರಂಗದಲ್ಲಿ ಸುಧೀರ್ಘವಾಗಿ ಸೇವೆ ಸಲ್ಲಿಸಿದ ಅಶೋಕ ಅವರಿಗೆ ಇಂದು ರಾಯಚೂರು ನಗರದ ಖಾಸಗಿ ಹೋಟೆಲ್ ನಲ್ಲಿ ಕಲಾ ಸಂಕುಲ ಸಂಸ್ಥೆ ಕಾರ್ಯದರ್ಶಿ ಮಾರುತಿ ಬಡಿಗೇರ್ ಸನ್ಮಾನಿಸಿ ಗೌರವಿಸಿದರು..

ಅಶೋಕ್ ಕನ್ನಡ ಚಿತ್ರರಂಗದಲ್ಲಿ ಸಕ್ರಿಯವಾಗಿರುವ ಹಿರಿಯ ನಟ 74 ವಯಸ್ಸಾ ಗಿದ್ದರು ಇನ್ನೂ ಹೀರೋ ತರ ಕಂಗೊಳಿಸುತ್ತಿದ್ದಾರೆ.

ತಮ್ಮ ಕಲಾತ್ಮಕ ಪಾತ್ರಗಳಿಗೆ ಹೆಸರಾಗಿರುವ ಅಶೋಕ್ ಸನಾದಿ ಅಪ್ಪಣ್ಣ.ರಂಗನಾಯಕಿ. ಕ್ರಾಂತಿಯೋಗಿ ಬಸವಣ್ಣ.ಮುಗಿಲ ಮಲ್ಲಿಗೆ.ಮನೆಗೆ ಬಂದ ಮಹಾಲಕ್ಷ್ಮಿ ಅಶೋಕ ಚಕ್ರ.ವರದಕ್ಷಿಣೆ ತಾಯಿಯ ಮಡಿಲಲ್ಲಿ ಹಲವಾರು ಚಲನಚಿತ್ರದಲ್ಲಿ ನಟರಾಗಿ ನಟಿಸಿರುವ ಅಶೋಕ್ ಅವರು ಇಂದು ರಾಯಚೂರಿಗೆ ಆಗಮಿಸಿದ್ದರು. ಕಲಾ ಸಂಕುಲ ಸಂಸ್ಥೆ 2011ರಲ್ಲಿ ರಾಯಚೂರಿನಲ್ಲಿ ದೇಶಿ ಸಂಭ್ರಮ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಅಶೋಕ್ ಅವರನ್ನು ಆಹ್ವಾನಿಸಲಾಗಿತ್ತು. ಬಹು ವರ್ಷಗಳ ನಂತರ ಮತ್ತೆ ರಾಯಚೂರಿಗೆ ಬಂದಿದ್ದು ತುಂಬಾ ಖುಷಿಯಾಯಿತು ಎಂದು ಅವರು ನೆನಪಿಸಿಕೊಂಡು ಮಾತನಾಡಿದರು. ಈ ಸಂದರ್ಭದಲ್ಲಿ ಕಲಾ ಸಂಕುಲ ಸಂಸ್ಥೆಯ ನಿರ್ದೇಶಕರಾದ ಮೌನೇಶ ವಡವಾಟಿ. ಡಾ. ಷಣ್ಮುಖ ಚಲವಾದಿ ಇನ್ನಿತರರಿದ್ದರು. ರೇಖಾ ಬಡಿಗೇರ್ ಬರೆದಿರುವ ಉದೋ ಉದೋ ಕೃತಿಯನ್ನು ನಟ ಅಶೋಕ್ ಅವರಿಗೆ ಕೊಡಲಾಯಿತು.

ಏಪ್ರಿಲ್ 20 ರಂದು ಸಾಂಸ್ಕೃತಿಕ ನಾಯಕ ಬಸವಣ್ಣನವರ ಜಯಂತಿಯು ವಿಜೃಂಭಣೆಯಿಂದ ಆಚರಿಸಲು ನಿರ್ಧಾರ



ಕಲಬುರಗಿ,ಏ.11-

ಕರ್ನಾಟಕದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಕಲಬುರಗಿ ಜಿಲ್ಲಾಯಾದ್ಯಂತ ಇದೇ ಏಪ್ರಿಲ್ 20 ರಂದು ವಿಜೃಂಭಣೆಯಿಂದ ಆಚರಿಸಲು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು.

ಗುರುವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಯಪ್ಪ ಹುಣಸಗಿ ಅವರು, ಏಪ್ರಿಲ್ 20 ರಂದು ನಗರದ ಜಗತ್ ವೃತ್ತದಲ್ಲಿರುವ ಬಸವಣ್ಣನವರ ಪ್ರತಿಮೆಗೆ ಬೆಳಿಗ್ಗೆ 8.30 ಕ್ಕೆ ಮಾಲಾರ್ಪಣೆ ಮಾಡಿದ ನಂತರ ಅಲ್ಲಿಯೇ ವೇದಿಕೆ ಕಾರ್ಯಕ್ರಮ ನೆರವೇರಿಸಲು ಹಾಗೂ ಶಿಷ್ಟಾಚಾರದಂತೆ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಎಲ್ಲಾ ಚುನಾಯಿತ ಜನಪ್ರತಿನಿಧಿಗಳನ್ನು ಆಹ್ವಾನಿಸಲು ಸಭೆ ಒಪ್ಪಿಗೆ ಸೂಚಿಸಿತ್ತು.

ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣನವರು ಜೀವನದುದ್ದಕ್ಕೂ ಜಾತಿ ರಹಿತ ಸಮ-ಸಮಾಜ ನಿರ್ಮಾಣಕ್ಕೆ ಹೋರಾಡಿದ್ದು, ಹೀಗಾಗಿ ಅವರ ಜಯಂತಿ ಕಾರ್ಯಕ್ರಮಕ್ಕೆ ಸಮುದಾಯದವರ ಬೇಡಿಕೆಯಂತೆ ವಿಶೇಷವಾಗಿ ಎಲ್ಲಾ ಬಸವಾದಿ ಶರಣರ ಸಮುದಾಯದವರಿಗೆ ಆಹ್ವಾನಿಸಲು ನಿರ್ಧರಿಸಿದಲ್ಲದೆ ಬಸವಣ್ಣನವರ ಕುರಿತು ಮಾತನಾಡಲು ಓರ್ವ ಉಪನ್ಯಾಸಕರನ್ನು ಅಂತಿಮಗೊಳಿಸಿ ಕನ್ನಡ ಮತ್ತ ಸಂಸ್ಕೃತಿ ಇಲಾಖೆಗೆ ಹೆಸರು ನೀಡಬೇಕೆಂದು ಸಮುದಾಯದ ಮುಖಂಡರಿಗೆ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ತಿಳಿಸಿದರು.

ಬಸವ ಜಯಂತಿ ಅಂಗವಾಗಿ ವೇದಿಕೆ ಕಾರ್ಯಕ್ರಮ ನಡೆಯುವ ಬಸವೇಶ್ವರ ಪುತ್ಥಳಿ ಆವರಣ ಸ್ವಚ್ಛಗೊಳಿಸಬೇಕು. ಬಸವೇಶ್ವರ ಪುತ್ಥಳಿಗೆ ದೀಪಾಲಂಕಾರ ಮಾಡುವುದಲ್ಲದೆ ಹೂವಿನಿಂದ ಸಿಂಗರಿಸಬೇಕು. ವೇದಿಕೆ ಕಾರ್ಯಕ್ರಮಕ್ಕೆ ಗಣ್ಯರು, ಸಾರ್ವಜನಿಕರು ಭಾಗಿಯಾಗುವುದರಿಂದ ಪೊಲೀಸ್ ಭದ್ರತೆ ಒದಗಿಸಬೇಕು. ವಿದ್ಯುತ್ ವ್ಯತ್ಯಯವಾಗದಂತೆ ಎಚ್ಚರ ವಹಿಸಬೇಕು. ಬೇಸಿಗೆ ಕಾಲ ಇದಾಗಿದ್ದರಿಂದ ವೇದಿಕೆ ಮತ್ತು ಸಮಾಜದ ವತಿಯಿಂದ ನಡೆಯುವ ಬಸವಣ್ಣನವರ ಭಾವಚಿತ್ರದ ಭವ್ಯ ಮೆರವಣಿಗೆ ಸಂದರ್ಭದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದ ರಾಯಪ್ಪ ಹುಣಸಗಿ ಅವರು, ಜಿಲ್ಲೆಯ ಎಲ್ಲ ಸರ್ಕಾರಿ ಮತ್ತು ಅರೆ ಸರ್ಕಾರಿ ಕಚೇರಿ, ಶಾಲಾ-ಕಾಲೇಜುಗಳಲ್ಲಿ ಅಂದು ಬೆಳಿಗ್ಗೆ 9 ಗಂಟೆಗೆ ಬಸವ ಜಯಂತಿ ಆಚರಿಸಲು ಮತ್ತು ಕಲಬುರಗಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸುವಂತೆ ಸುತ್ತೋಲೆ ಕಳುಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಅವರು ಮಾತನಾಡಿ, ಬಸವೇಶ್ವರ ಪುತ್ಥಳಿ ಮತ್ತು ಸುತ್ತಮುತ್ತ ಸುಣ್ಣ-ಬಣ್ಣ, ಸಣ್ಣ ಪುಟ್ಟ ದುರಸ್ತಿ ಹಾಗೂ ವಿದ್ಯುತ್ ವ್ಯವಸ್ಥೆ ಸರಿಪಡಿಸುವ ಸೇರಿದಂತೆ ಅಗತ್ಯ ಮೂಲಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದು ಸಮಾಜದ ಮುಖಂಡರಿಗೆ ತಿಳಿಸಿದರು.

ಸಭೆಯಲ್ಲಿ ಭಾಗವಹಿಸಿದ ವಿವಿಧ ಸಮುದಾಯದ ಮುಖಂಡರು ಮಾತನಾಡಿ, ಬೇಸಿಗೆ ಇರುವ ಕಾರಣ ಮೆರವಣಿಗೆ ಸಂದರ್ಭದಲ್ಲಿ ಆಂಬುಲೆನ್ಸ್ ವಾಹನ ತೈನಾತಿಸಬೇಕು. ಪಾಲಿಕೆಯಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ವಚನ ಸಾಹಿತ್ಯ ಸಂಪುಟ ಮುದ್ರಿಸಿ ಹೊರತರಬೇಕು. ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ವಚನಗಳ ಕುರಿತು ಸ್ಪರ್ಧೆ ಆಯೋಜಿಸಬೇಕೆಂದು ಇತ್ಯಾದಿ ಸಲಹೆಗಳನ್ನು ನೀಡಿದರು.

ಸಭೆಯಲ್ಲಿ 893ನೇ ಬಸವ ಜಯಂತಿ ಜಯಂತ್ಯೋತ್ಸವ ಸಮಿತಿಯ ಅಧ್ಯಕ್ಷರಾದ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಹಾಗೂ ಆಳಂದ ಶಾಸಕ ಬಿ.ಆರ್. ಪಾಟೀಲ್, ಕಾರ್ಯಧ್ಯಕ್ಷರಾಗಿರುವ ವಿಧಾನ ಪರಿಷತ್ ಶಾಸಕ ಬಿ.ಜಿ. ಪಾಟೀಲ, ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ್ ಪಾಟೀಲ್, ಹೆಚ್ಚುವರಿ ಎಸ್ಪಿ ಮಹೇಶ್ ಮೇಘಣ್ಣನವರ್, ಡಿ.ಸಿ.ಪಿ ಪ್ರವೀಣ ನಾಯಕ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರಿ ಅ. ನಾಸಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಭಾಗವಹಿಸಿದ್ದರು.

ಅಬಕಾರಿ ದಾಳಿ ಗಾಂಜಾ ಪದಾರ್ಥ ವಶ



ಯಾದಗಿರಿ,ಏ.11-

ಅಬಕಾರಿದಾಳಿಯಲ್ಲಿ ವಶ ಪಡಿಸಿಕೊಂಡ ಗಾಂಜಾ ಪದಾರ್ಥಕ್ಕೆ ಸಂಬಂಧಿಸಿದ ಹಿನ್ನೆಲೆ ಯಾದಗಿರಿ ಜಿಲ್ಲೆಯ ವ್ಯಾಪ್ತಿಯಲ್ಲಿ ನಕಲಿಮದ್ಯ, ಅಕ್ರಮಮದ್ಯ, ಕಲಬೆರಕೆ ಸೇಂದಿ, ಕಳ್ಳಭಟ್ಟಿ ಸಾರಾಯಿ ಹಾಗೂ ಇತರೆ ಅಬಕಾರಿ ಅಕ್ರಮ ಪದಾರ್ಥಗಳ ತಯಾರಿಕೆ ಸಾಗಾಣಿಕೆ ಸಂಗ್ರಹಣೆ ಹಾಗೂ ಮಾರಾಟಗಳಂತಹ ಅಕ್ರಮ ಚಟುವಟಿಕೆಗಳು ನಡೆಯದಂತೆ/ ತಡೆಗಟ್ಟಲು ಜಿಲ್ಲೆ ಮತ್ತು ತಾಲ್ಲೂಕಿನಾದ್ಯಂತ ವಿಶೇಷತ ತನಿಖಾತಂಡ ಗಳನ್ನು ರಚಿಸಿಕೊಂಡು 2026ರ ಏಪ್ರಿಲ್ 8 ರಂದು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕೆಂಭಾವಿ ವ್ಯಾಪ್ತಿಯ ನಗನೂರು ಗ್ರಾಮದಲ್ಲಿ ಜಾರಿ ಮತ್ತು ತನಿಖೆಯನ್ನು ಕೈಗೊಳ್ಳುತ್ತಿರುವಾಗ ಈ ಅಬಕಾರಿ ದಾಳಿಯಲ್ಲಿ ಹಸಿಗಾಂಜಾ ಗಿಡಗಳನ್ನು ಬೆಳೆಸಿರುವುದು ಕಂಡುಬಂದಿರುವುದರಿಂದ ಅದನ್ನು ಪತ್ತೆ ಹಚ್ಚಿಸಿ ಗಾಂಜಾ ಗಿಡಗಳನ್ನು ವಶಪಡಿಸಿಕೊಂಡು ಸಂಬಂಧಿಸಿದವರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮಕೈಗೊಂಡಿದೆ ಎಂದು ಯಾದಗಿರಿ ಅಬಕಾರಿ ಉಪ ಆಯುಕ್ತರು ಶ್ರೀಮತಿ ಶಾರದಾ ಸಿ.ಕೋಲಕಾರ ತಿಳಿಸಿ ದ್ದಾರೆ.

ಪ್ರಕರಣ ಕಲಬುರಗಿ ವಿಭಾಗ, ಅಬಕಾರಿ ಜಂಟಿ ಆಯುಕ್ತರು ಹಾಗೂ ಯಾದಗಿರಿ ಅಬಕಾರಿ ಉಪ ಆಯುಕ್ತರು ಅವರ ನಿರ್ದೇಶನದ ಮೇರೆಗೆ ಶ್ರೀಹರ್ಷರಾಜ್ಪೆ. ಅಬಕಾರಿ ಉಪಅಧೀಕ್ಷಕರು ಉಪವಿಭಾಗಶಹಾಪೂರ ಮಾರ್ಗದರ್ಶನದಲ್ಲಿ ಖಚಿತ ಭಾತ್ಮಿಯ ಮೇರೆಗೆ ನೇತೃತ್ವದಲ್ಲಿ ಯಶಸ್ವಿ ಅಬಕಾರಿ ದಾಳಿ ನಡೆಸಲಾಯಿತು. ಸುರಪುರ ತಾಲ್ಲೂಕಿನ ಕೆಂಭಾವಿ ಸೀಮೆ ವ್ಯಾಪ್ತಿಯ ನಗನೂರು ಗ್ರಾಮದ ನಿವಾಸಿ ಬಸವರಾಜ ತಂದೆ ಭೀಮಣ್ಣ ಬೆಳ್ಳಿ (ಸಾ.ನಗನೂರು) ಎಂಬುವವರಿಗೆ ಸೇರಿದ ಕೆಂಭಾವಿ ಹೋಬಳಿಯ ಪರಸನಹಳ್ಳಿ ಗ್ರಾಮದ ಸರ್ವೆನಂ. 296ರ ಜಮೀನಿನ ಮೇಲೆ ದಾಳಿ ಮಾಡಿದಾಗ, ಅಕ್ರಮ ಮಾರಾಟದ ಉದ್ದೇಶದಿಂದ ಬೆಳೆಸಲಾಗಿದ್ದ ಸುಮಾರು 4 ಕೆಜಿ 900 ಗ್ರಾಂ ತೂಕದ, ಹೂ ಮತ್ತು ತೆನೆಗಳಿಂದ ಕೂಡಿದ ಒಟ್ಟು 30 ಹಸಿ ಗಾಂಜಾ ಗಿಡಗಳನ್ನು ಪತ್ತೆ ಹಚ್ಚಿ ವಶಪಡಿಸಿಕೊಳ್ಳಲಾಗಿದೆ.

ಈ ಸಂಬಂಧ ಆರೋಪಿಯ ವಿರುದ್ಧ ಎನ್.ಡಿ.ಪಿ.ಎಸ್ ಕಾಯ್ದೆ 1985ರ ಅಡಿಯಲ್ಲಿ ಪ್ರಕರಣ ದಾಖಲಿಸಿ, ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರು ಪಡಿಸಿ ಆರೋಪಿಯಾದ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ನಗನೂರು ಗ್ರಾಮದ ಬಸವರಾಜ ತಂದೆ ಭೀಮಣ್ಣ ಬೆಳ್ಳಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ದಾಳಿ ಸಮಯದಲ್ಲಿ ಈ ಪ್ರಕರಣವನ್ನು ಸುರಪುರ ವಲಯದ ಅಬಕಾರಿ ನಿರೀಕ್ಷಕರಾದ ಕೇದಾರನಾಥ ಎಸ್.ಟಿ ಅವರು ದಾಖಲಿಸಿಕೊಂಡಿ ರುತ್ತಾರೆ. ಈ ದಾಳಿಯಲ್ಲಿ ವಸಂತ ಕುಮಾರ್ಮತ್ತು ಅನಿಲಕುಮಾರ (ಅಬಕಾರಿ ಉಪ ನಿರೀಕ್ಷಕರು, ಸುರಪುರ ವಲಯ). ಅಬಕಾರಿ ಮುಖ್ಯ ಪೇದೆಗಳಾದ ಯಮನಪ್ಪ, ಸಂಪತಕುಮಾರ ಸಂದೀಪನಾಯಕ, ವಾಹನ ಚಾಲಕರಾದ ರಮೇಶ ದೇಸಾಯಿ, ಗೃಹರಕ್ಷಕ ದಳದ ಸಿಬ್ಬಂದಿಗಳು ಹಾಜರಿದ್ದರು. ಈ ಪ್ರಕರಣದ ಮುಂದಿನ ತನಿಖೆ ಪ್ರಗತಿಯಲ್ಲಿರುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊರಾರ್ಜಿ ವಸತಿ ಶಾಲೆ : ಶೇ.100 ರಷ್ಟು ಫಲಿತಾಂಶ

ಬಾಗಲಕೋಟೆ : ಏ.11-

ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡಿದ್ದು, ನಗನಗರದ ಮೊರಾರ್ಜಿ ದೇಸಾಯಿ ವಿಜ್ಞಾನ ಪದವಿ ಪೂರ್ವ ವಸತಿ ಕಾಲೇಜಿನ ಫಲಿತಾಂಶ 100ಕ್ಕೆ 100ರಷ್ಟು ಆಗಿರುವುದಾಗಿ ಕಾಲೇಜಿನ ಪ್ರಾಚಾರ್ಯರು ತಿಳಿಸಿದ್ದಾರೆ.

ಒಟ್ಟು 78 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅತ್ಯುತ್ತಮ ಶ್ರೇಣಿಯಲ್ಲಿ 47 ವಿದ್ಯಾರ್ಥಿಗಳು, ಉತ್ತಮ ಶ್ರೇಣಿಯಲ್ಲಿ 30, ದ್ವಿತೀಯ ಶ್ರೇಣಿಯಲ್ಲಿ ಓರ್ವ ವಿದ್ಯಾರ್ಥಿ ಉತ್ತೀರ್ಣರಾಗಿದ್ದಾರೆ. ಸವಿತಾ ಕರಿಯಪ್ಪಮಾಯನ್ನವರ 600ಕ್ಕೆ 583 ಅಂಕ ಪಡೆದು (ಶೇ.97.16) ಕಾಲೇಜಿನ ಪ್ರಥಮ ಸ್ಥಾನ ಪಡೆದರೆ, ಸುಕನ್ಯಾ ಲಕ್ಷ್ಮಣ ಚಿಪ್ಪಲಕಟ್ಟಿ 600ಕ್ಕೆ 582 ಅಂಕ ಪಡೆದು (ಶೇ.97) ದ್ವಿತೀಯ ಸ್ಥಾನ ಹಾಗೂ ಐಶ್ವರ್ಯ ಪಡಿಯಪ್ಪ ಕರಿಗಾರ 600ಕ್ಕೆ 578 ಅಂಕ ಪಡೆದು (ಶೇ.96.33) ತೃತೀಯ ಸ್ಥಾನ ಪಡೆದು ಕೊಂಡಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಇಲಾಖೆಯ ಅಧಿಕಾರಿಗಳು, ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗ ಸಂತಸ ವ್ಯಕ್ತಪಡಿಸಿದ್ದಾರೆ.

ಕಾಯಕ ಶರಣರ ಸಂದೇಶಗಳು ಸಮಾಜದ ಕೈಗನ್ನಡಿ: ಪ್ರೊ. ಶಶಿಕಾಂತ ಎಸ್. ಉಡಿಕೇರಿ



ಕಲಬುರಗಿ,ಏ.11-

ಸಮಾಜದ ಅಭ್ಯುದಯಕ್ಕಾಗಿ ಕೈಗೊಳ್ಳುವ ಕಾಯಕವನ್ನು ಸತ್ಯ ಮತ್ತು ನಿಷ್ಠೆಯಿಂದ ಮಾಡಬೇಕು. ಯಾವುದೇ ಮೇಲು-ಕೀಳು ಬೇದವಿಲ್ಲದೆ ಸಮ-ಸಮಾಜ, ಸಮಾನತೆ ಮತ್ತು ಸಹಬಾಳ್ವೆ ಜೀವನ ಪ್ರತಿಯೊಬ್ಬ ವ್ಯಕ್ತಿಗೂ ಸಿಗಬೇಕು ಎಂಬುದು ಕಾಯಕ ಶರಣರ ಆಶಯವಾಗಿತ್ತು. ಶರಣರ ಜೀವನಾನುಭವ ಮತ್ತು ಪ್ರಖರ ಸಂದೇಶಗಳು ಸಮಾಜದ ಕೈಗನ್ನಡಿಯಾಗಿವೆ ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಶಿಕಾಂತ ಎಸ್. ಉಡಿಕೇರಿ ಅಭಿಪ್ರಾಯಪಟ್ಟರು.

ಗುಲ್ಬರ್ಗಾ ವಿಶ್ವವಿದ್ಯಾಲಯದ ಮಹಾತ್ಮಗಾಂಧಿ ಸಭಾಂಗಣದಲ್ಲಿ ದೇವರ ದಾಸಿಮಯ್ಯ ಮತ್ತು ಕಾಯಕ ಶರಣರ ಜಯಂತ್ಯೋತ್ಸವ ಅಂಗವಾಗಿ ಆಯೋಜಿಸಿದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ದೇವರ ದಾಸಿಮಯ್ಯ ಮತ್ತು ಕಾಯಕ ಶರಣರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಮಾತನಾಡಿದರು.

12ನೇ ಶತಮಾನದ ಬಸವಣ್ಣ ಅವರಿಗಿಂತ ಹಿರಿಯ ಶರಣರಾದ ದೇವರ ದಾಸಿಮಯ್ಯ, ಮಾದಾರ ಚೆನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ ಮತ್ತು ಉರಿಲಿಂಗ ಪೆದ್ದಿ ಅವರು ಸಮಾಜದ ನೈಜ ಸಂಗತಿಗಳನ್ನು ಕಂಡು ವಚನಗಳನ್ನು ರಚಿಸಿದ್ದಾರೆ. ಗಂಡು-ಹೆಣ್ಣು, ಮೇಲು-ಕೀಳು, ಬಡವ-ಬಲ್ಲಿದ ಎಂಬ ತಾರತಮ್ಯ ನಿವಾರಣೆಗಾಗಿ ಶರಣರು ನಡೆಸಿದ ನಿರಂತರವಾದ ಚಳುವಳಿ ಜಗತ್ತಿನ ಯಾವ ಭಾಗದಲ್ಲಿಯೂ ನಡೆದಿಲ್ಲ. ಶರಣರ ಜೀವನ, ವಚನ ಮತ್ತು ಚಳುವಳಿಗೆ ಅದರದೇ ಆದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವವಿದೆ. ವಿದ್ಯಾರ್ಥಿಗಳು ಶರಣರ ವಚನ ಪರಂಪರೆ ಮತ್ತು ಅವರ ಕೊಡುಗೆಗಳ ಬಗ್ಗೆ ಅಧ್ಯಯನ ಮಾಡುವುದು ಅಗತ್ಯವಿದೆ ಎಂದರು.

ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ಪ್ರಾಧ್ಯಾಪಕ ಡಾ. ಶ್ರೀಶೈಲ ನಾಗರಾಳ ತಮ್ಮ ಉಪನ್ಯಾಸದಲ್ಲಿ 12ನೇ ಶತಮಾನದ ಪೂರ್ವದಲ್ಲಿ ಜನಿಸಿದ ದೇವರ ದಾಸಿಮಯ್ಯ ಮನುಕುಲದ ಒಳಿತಿಗೆ ಜನಾಂದೋಲನ ಮಾಡಿದರು. ವಚನ ಚಳುವಳಿಯಲ್ಲಿ ಜೀವಧ್ವನಿಯಾಗಿ ಮೇಲ್ವರ್ಗಗಳ ಜನರು ಪೂಜೆ ಮತ್ತು ಧರ್ಮ ಹೆಸರಿನಲ್ಲಿ ಶ್ರಮಿಕ ವರ್ಗವನ್ನು ಶೋಷಿಸಲಾಗುತಿತ್ತು. ಒಬ್ಬ ಶರಣರ ಧ್ವನಿಗೆ ಎಲ್ಲಾ ಶರಣರ ಧ್ವನಿಗೂಡಿ ಸಮಾಜದ ಎಲ್ಲಾ ವರ್ಗದ ಜನರ ಜೀವನ ಸುಧಾರಣೆಗೆ ಶ್ರಮಿಸಿದರು. ನೇಯ್ಗೆ ಕಾಯಕದ ಮೂಲಕ ಇತರರಿಗೆ ಕಾಯಕ ಪ್ರಜ್ಞೆ ಮೂಡಿಸಿದರು. ಹಸಿವು ಮತ್ತು ಸಮಾಜದ ಬಗ್ಗೆ ಅಪಾರ ಕಳಕಳಿ ಹೊಂದಿದ್ದ ದಾಸಿಮಯ್ಯ ಸ್ವಾವಲಂಬನೆ ಬದುಕಿಗೆ ಮಾರ್ಗ ತೋರಿಸಿ ಬಡತನ ನಿವಾರಿಸಿದರು, ದುರ್ಬಲ ವರ್ಗಗಳನ್ನು ಸಬಲರನ್ನಾಗಿಸಿ ಸಮಾನತೆಯ ಸಮಾಜವನ್ನು ನಿರ್ಮಿಸಿದರು. ಆಧ್ಯಾತ್ಮಕ ಪರಿಭಾಷೆಯಲ್ಲಿ ಮಾತನಾಡಿ ಕಾಯಕ ತತ್ವ, ಕಾಯಕ ಪ್ರಜ್ಞೆ ಬೆಳೆಸಿದರು. ರಾಮನಾಥ ಅಂಕಿತನಾಮದೊದಿಗೆ ಸುಮಾರು 150 ವಚನಗಳು ಲಬ್ಯತೆ ಬಗ್ಗೆ ಹರಿಹರ ರಗಳೆ ಮತ್ತು ಪುರಾಣ, ಕಾವ್ಯಗಳಲ್ಲಿ ಉಲ್ಲೇಖವಿದೆ. ಉನ್ನತ ವಿಚಾರಗಳನ್ನು ಸರಳ ನುಡಿಗಟ್ಟುಗಳಲ್ಲಿ ರಚಿಸಿರುವ ದಾಸಿಮಯ್ಯ ಅವರ ವಚನಗಳು ಸಮಾಜಕ್ಕೆ ಪ್ರೇರಣೆಯಾಗಿ ಶರಣ ಪರಂಪರೆಯಲ್ಲಿ ಮಹಾಪುರುಷನಾಗಿ ಬೆಳೆದಿದ್ದಾರೆ ಎಂದರು.

ವಿಶ್ರಾಂತ ಪ್ರಾಧ್ಯಾಪಕಿ ಡಾ. ಅಮೃತ ಕಟಕೆ ಮಾತನಾಡಿ ಶರಣ ಸಾಹಿತ್ಯ ಪರಂಪರೆಯಲ್ಲಿ ಕಾಯಕ ಶರಣರು ಶುದ್ಧ ಮತ್ತು ಸತ್ಯ ಕಾಯಕವನ್ನು ಜನಪ್ರಿಯಗೊಳಿಸಿದರು. ಶ್ರೇಷ್ಠ ಕಾಯಕ ಪರಂಪರೆ ಬೆಳೆಸಿದರು. ಆಡಳಿತ ಸೇವೆಯಷ್ಟೇ ಕಸ ಗುಡಿಸುವ ಕೆಲಸಕ್ಕೂ ಶ್ರೇಷ್ಟತೆ ಇದೆ. ಎಲ್ಲಾ ಕುಲ ಕಸುಬುಗಳಿಗೂ ತನ್ನದೇ ಮಹತ್ವವಿದೆ ಎಂಬುದು ಕಾಯಕ ಶರಣರ ಆಶಯವಾಗಿತ್ತು. ಕುಂಬಾರಿಕೆ, ಅಕ್ಕ ಸಾಲಿಗ, ಅಂಬಿಗ, ಬಡಿಗ, ಸಮಗಾರ ಹೀಗೆ ಶರಣರಲ್ಲಿ ಸಮಾನ ಕಾಯಕ ಪ್ರಜ್ಞೆಯಿತ್ತು. 17ನೇ ಶತಮಾನದ ಕೈಗಾರಿಕ ಕ್ರಾಂತಿ ನಂತರ ನಡೆದ ಕಲ್ಯಾಣ ಕ್ರಾಂತಿಯಿದ ದುಡಿಯುವ ವರ್ಗ ಒಂದುಗೂಡಲು ಸಾಧ್ಯವಾಯಿತು. 12ನೇ ಶತಮಾನದ ಬಸವಣ್ಣನವರ ಸಮಕಾಲೀನರಾದ ಮಾದಾರ ಚೆನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ ಮತ್ತು ಉರಿಲಿಂಗ ಪೆದ್ದಿ ಇವರಜಾತಿ ಪದ್ಧತಿ, ಲಿಂಗ ತಾರತಮ್ಯ, ಮೂಢ ನಂಬಿಕೆ, ಕಾಯಕ, ಭಕ್ತಿ ಮತ್ತು ಸಮಾನತೆ ಮತ್ತು ದಾಸೋಹ ತತ್ವ ಮೂಲಕ ಸಮ-ಸಮಾಜವನ್ನು ರೂಪಿಸಿದರು ಎಂದು ಕಾಯಕ ಶರಣರ ಕೊಡುಗೆಗಳನ್ನು ವಿವರಿಸಿದರು.

ಕಲಾ ನಿಕಾಯದ ಡೀನ್ ಹಾಗೂ ಕಾಯಕ ಶರಣರ ಜಯಂತ್ಯೋತ್ಸವ ಸಮಿತಿ ಸಂಚಾಲಕ ಪ್ರೊ. ಎಚ್. ಟಿ. ಪೋತೆ ಗಣ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ ಜಾಗತಿಕ ನೆಲೆಯಲ್ಲಿ ಬುದ್ಧನ ನಂತರ ಕಲ್ಯಾಣ ಕರ್ನಾಟಕದಲ್ಲಿ ಶರಣ ಚಳುವಳಿ ನಡೆದಿದೆ. ಬಸವಣ್ಣನ ನಾಡಿನಲ್ಲಿ ಜನಪರ ಕಳಕಳಿ, ಮಾನವೀಯ ತತ್ವಗಳನ್ನು ಬಿತ್ತಲು ಕ್ರಾಂತಿ ನಡೆದು ತಮ್ಮ ಕುಲ ವೃತ್ತಿ ಧರ್ಮ ಮತ್ತು ಕಾಯಕಗಳಿಂದ ಸಮಾಜ ಸುಧಾರಣೆ ಸಾಧ್ಯವಾಯಿತು. ಜಗತ್ತಿನ ಬೇರೆ ಕಡೆಗಳಿಂದ ಬಂದ ಶರಣರು ಅಪ್ಪಿಕೊಂಡರು. ಬಸವಣ್ಣನ ಮೂರ್ತಿ ಲಂಡನಿನಲ್ಲಿ ಸ್ಥಾಪಿಸಲಾಗಿದೆ. ಎಲ್ಲರೂ ಬಸವನ ತತ್ವಗಳನ್ನು ಜಗತ್ತಿನಲ್ಲಿ ಗೌರವಿಸಲಾಗುತ್ತಿದೆ. ಆದರೆ, ದೇಶದಲ್ಲಿ ಜಾತಿ, ವರ್ಗ ತಾರತಮ್ಯ ಹೆಚ್ಚಾಗಿದೆ. ವಿದ್ಯಾರ್ಥಿಗಳು ಶರಣರ ಚಿಂತನೆ ಮತ್ತು ಕಾಯಕ ಪ್ರಜ್ಞೆ ಮೂಲಕ ಶಾಂತಿ, ಪ್ರೀತಿ, ಸಮಾನ ಸಂದೇಶಗಳನ್ನು ಜಗತ್ತಿಗೆ ಸಾರಬೇಕು ಎಂದರು.

ಸಿಂಡಿಕೇಟ್ ಸದಸ್ಯ ರಾಘವೇಂದ್ರ ಎಂ. ಬೈರಪ್ಪ, ವಿದ್ಯಾವಿಷಯಕ ಪರಿಷತ್ ಸದಸ್ಯರು ಪ್ರೊ. ಟಿ. ಶಂಕರಪ್ಪ ಮುಖ್ಯ ಅತಿಥಿಗಳಾಗಿ ಕುಲಸಚಿವ ಪ್ರೊ. ರಮೇಶ ಲಂಡನಕರ್, ಮೌಲ್ಯಮಾಪನ ಕುಲಸಚಿವ ಡಾ. ಎನ್. ಜಿ. ಕಣ್ಣೂರ, ಹಣಕಾಸು ಅಧಿಕಾರಿ ಜಯಾಂಬಿಕ, ದೇವರ ದಾಸಿಮಯ್ಯ ಜಯಂತ್ಯೋತ್ಸವ ಸಮಿತಿ ಸಂಚಾಲಕ ಬಿ. ಎಂ. ರುದ್ರವಾಡಿ ಉಪಸ್ಥಿತರಿದ್ದರು.

ವಿವಿಧ ನಿಕಾಯಗಳ ಡೀನರು, ಸಿಂಡಿಕೇಟ್ ಹಾಗೂ ವಿದ್ಯಾ ವಿಷಯಕ ಪರಿಷತ್ ಸದಸ್ಯರು, ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿಗಳು, ಅತಿಥಿ ಉಪಾನ್ಯಾಸಕರು, ಬೋಧಕೇತರ ಸಿಬ್ಬಂದಿ, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ವಿವಿಧ ಸಮುದಾಯಗಳ ನಾಗರೀಕರು ಭಾಗವಹಿಸಿದ್ದರು.

ಸಂಗೀತಾ ವಿಭಾಗದ ಅತಿಥಿ ಉಪನ್ಯಾಸಕರಾದ ಡಾ. ಲಕ್ಷ್ಮಿ ಶಂಕರ್ ಜೋಷಿ, ಡಾ. ಜಯ ದಾನಮ್ಮ ಮತ್ತು ಡಾ. ವಿಜಯಲಕ್ಷ್ಮಿ ನಾಡಗೀತೆ ಹಾಗೂ ಶರಣರ ವಚನ ಪ್ರಸ್ತುತಪಡಿಸಿದರು. ಡಾ. ಎಂ. ಬಿ. ಕಟ್ಟಿ ಕಾರ್ಯಕ್ರಮ ನಿರ್ವಹಿಸಿದರು. ದೇವರ ದಾಸಿಮಯ್ಯ ಜಯಂತ್ಯೋತ್ಸವ ಸಮಿತಿ ಸಂಚಾಲಕ ಬಿ. ಎಂ. ರುದ್ರವಾಡಿ ವಂದಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಬಿಸಿ ಗಾಳಿ- ಪ್ರಕೃತಿಯ ಮುನಿಸಲ್ಲ, ಮಾನವನಿರ್ಮಿತ ಸಮಸ್ಯೆಗಳ ಪ್ರತಿಫಲ



ತಾಪಮಾನ ಹೆಚ್ಚಳ ಮತ್ತು ಬಿಸಿ ಗಾಳಿ ಪ್ರಕೃತಿಯ ಕೋಪವಲ್ಲ, ನಮ್ಮ ನಿರ್ಲಕ್ಷ್ಯದ ಪ್ರತಿಫಲ. ಇದು ಎಚ್ಚರಿಕೆಯ ಗಂಟೆ. ಇದನ್ನು ಅರಿತು ನಮಗಲ್ಲ, ನಮ್ಮ ಮಕ್ಕಳ ನೆಮ್ಮದಿಯ ಬದುಕಿಗಾಗಿ ಜಾಗೃತರಾಗಬೇಕಿದೆ. ಇಲ್ಲದಿದ್ದರೆ, ಇಂದಿನ ಬಿಸಿ ಗಾಳಿಯೇ ನಾಳೆಯ ಮಹಾಪ್ರಳಯವಾದರೂ ಆಶ್ಚರ್ಯವಿಲ್ಲ.

ಕಡು ಬೇಸಿಗೆಯ ಬಿಸಿಲ ದಗೆಯಿಂದ ಬೇಯುತ್ತಿರುವಾಗಲೇ, ಮುಂದಿನ ಮೂರು ದಿನಗಳಲ್ಲಿ ತೀವ್ರ ಸ್ವರೂಪದ ಬಿಸಿ ಗಾಳಿಗೆ ಕರ್ನಾಟಕ ಮೈಚಾಚಲಿದೆ. ಅಧಿಕ ಉಷ್ಣಾಂಶ ದಾಖಲಾಗುವ, ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ, ಜನ ಅಪಾಯಕ್ಕೆ ಸಿಲುಕುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಎಚ್ಚರಿಕೆ ನೀಡಿದೆ.

ಇಂದು ಬಿಸಿ ಗಾಳಿ ಎಂಬ ಪದ ಕೇವಲ ಹವಾಮಾನ ವರದಿಗಳಿಗಷ್ಟೇ ಸೀಮಿತವಾಗಿಲ್ಲ. ಪ್ರತಿಯೊಬ್ಬರ ಬದುಕಿನ ಭಾಗವೇ ಆಗಿದೆ, ಭಾರೀ ಪರಿಣಾಮ ಬೀರುತ್ತಿದೆ. ನಿಲ್ಲಲಾಗದ, ಕೂರಲಾಗದ, ತಾಳಲಾರದ ತಳಮಳವನ್ನು ಸೃಷ್ಟಿಸುತ್ತಿದೆ. ಜನರ ಜೀವನವನ್ನು ಹೈರಾಣು ಮಾಡುತ್ತಿದೆ. ಅದರಲ್ಲೂ ವಯಸ್ಕರು, ಮಕ್ಕಳು ಮತ್ತು ಹೃದಯಸಂಬಂಧಿ ರೋಗಿಗಳನ್ನು ಬಾಧಿಸುತ್ತಿದೆ. ಈ ಬೇಸಿಗೆ ಹಿಂದಿನಂತಿಲ್ಲ ಎಂಬುದನ್ನು ಮತ್ತೆ ಮತ್ತೆ ಮನದಟ್ಟು ಮಾಡಿಸುತ್ತಿದೆ.

ಬಿಸಿ ಗಾಳಿಗೆ ಜಾಗತಿಕ ತಾಪಮಾನ ಏರಿಕೆಯೇ ಪ್ರಮುಖ ಕಾರಣ ಎನ್ನುವುದು ತಜ್ಞರ ಅಭಿಮತವಾಗಿದೆ. ಪೆಸಿಫಿಕ್ ಸಾಗರದಲ್ಲಿ ಉಂಟಾಗುವ ಎಲ್ ನಿನೋ(ಮಹಾಸಾಗರದ ಮೇಲೆ ಗಾಳಿ ಮತ್ತು ಸಮುದ್ರ ಮೇಲ್ಮೈ ತಾಪಮಾನದಲ್ಲಿನ ವ್ಯತ್ಯಾಸದಿಂದ ಹೊರಹೊಮ್ಮುವ ಉಷ್ಣವಲಯ) ಪ್ರಕ್ರಿಯೆಯಿಂದ ವಾತಾವರಣ ಬದಲಾಗಿ ಬಿಸಿ ಗಾಳಿ ಹೆಚ್ಚಾಗುತ್ತದೆ. ಹಸಿರುಮನೆ ಅನಿಲ (ಕಾರ್ಬನ್ ಡೈಆಕ್ಸೈಡ್, ಮೀಥೇನ್) ಹೊರಸೂಸುವಿಕೆ ಹೆಚ್ಚಳದಿಂದ ಭೂಮಿಯ ಉಷ್ಣತೆ ಹೆಚ್ಚುತ್ತದೆ. ಇದರಿಂದ ಉಷ್ಣ ಅಲೆಗಳು ಅಥವಾ ಬಿಸಿ ಗಾಳಿ ಬೀಸತೊಡಗುತ್ತದೆ. ಬಿಸಿ ಗಾಳಿ ಎಂದರೆ ಒಂದು ಪ್ರದೇಶದಲ್ಲಿ ಸಾಮಾನ್ಯ ಉಷ್ಣಾಂಶಕ್ಕಿಂತ ಹೆಚ್ಚು ಬಿಸಿಯಾದ ಗಾಳಿ ಬೀಸುವುದು. ಉದಾಹರಣೆಗೆ, ಬಯಲು ಪ್ರದೇಶಗಳಲ್ಲಿ ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾದರೆ, ಅದನ್ನು ಬಿಸಿ ಗಾಳಿ ಅಥವಾ ಹೀಟ್ ವೇವ್ಸ್ ಎಂದು ಪರಿಗಣಿಸಲಾಗುತ್ತದೆ.

ಭೂಮಿ ತನ್ನ ಸಹಜ ಸಮತೋಲನವನ್ನು ಕಳೆದುಕೊಳ್ಳುತ್ತಿದೆ ಎಂಬುದಕ್ಕೆ ತಾಪಮಾನ ಹೆಚ್ಚಳ ಮತ್ತು ಬಿಸಿ ಗಾಳಿಯ ಅಬ್ಬರ ಸ್ಪಷ್ಟ ಸೂಚನೆಗಳಾಗಿವೆ. ಇದು ಕೇವಲ ಹವಾಮಾನ ವೈಪರೀತ್ಯವಲ್ಲ, ಮಾನವ ನಿರ್ಮಿತ ಸಮಸ್ಯೆಗಳ ಪ್ರತಿಫಲ.

ಹಿಂದಿನ ಕಾಲದಲ್ಲಿ ಬೇಸಿಗೆ ಎಂದರೆ ಸಹಜ ಉಷ್ಣತೆ, ಅದು ಕೂಡ ಬದುಕಿನ ಒಂದು ಭಾಗವಾಗಿತ್ತು. ಆದರೆ ಈಗ ಅದು ಸಹಿಸಲಾರದ ಮಟ್ಟಕ್ಕೆ ಏರಿದೆ. ಅದಕ್ಕಿಂತ ಹೆಚ್ಚಾಗಿ ನಮ್ಮ ಮನಸ್ಥಿತಿ ಸಹಿಸಲಾರದ ಮಟ್ಟ ಮುಟ್ಟಿದೆ. ಕಂಡ ಕಂಫರ್ಟಬಲ್ ಸರಕೆಲ್ಲ ಬೇಕೆನಿಸಿದೆ. ಸರಳ ಬದುಕು ಸೈಡಿಗೆ ಸರಿದಿದೆ.

ಆಧುನಿಕ ಬದುಕನ್ನು ಅಪ್ಪಿಕೊಳ್ಳುವ ಧಾವಂತದಲ್ಲಿ ಮರಗಳನ್ನು ಕಡಿಯುತ್ತಿದ್ದೇವೆ. ಕೆರೆ-ಕಟ್ಟೆಗಳನ್ನು ಬರಿದಾಗಿಸುತ್ತಿದ್ದೇವೆ. ಆ ಜಾಗವನ್ನು ಕಾಂಕ್ರೀಟ್ ಕಟ್ಟಡಗಳ ಕಾಡು ಮಾಡುತ್ತಿದ್ದೇವೆ. ಆ ಐಷಾರಾಮಿ ಬದುಕು ಬೇಡುವ ಸರಕುಗಳು, ವಾಹನಗಳು, ಅವುಗಳ ಓಡಾಟ, ಜನದಟ್ಟಣೆ, ಹೊಗೆ-ಧೂಳು, ಕೈಗಾರಿಕೆಗಳಿಂದ ಮಾಲಿನ್ಯ- ಇವೆಲ್ಲವೂ ಸೇರಿ ವಾತಾವರಣದ ಉಷ್ಣತೆಯನ್ನು ಹೆಚ್ಚಿಸುತ್ತವೆ. ಗ್ರಾಮೀಣ ಪ್ರದೇಶಗಳ ಪರಿಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ನಗರಗಳತ್ತ ಆಕರ್ಷಿತರಾದ ಯುವಜನತೆ ಕೃಷಿ ಬಗ್ಗೆ ಅಸಡ್ಡೆ ತೋರಿರುವುದರಿಂದ ಕೃಷಿ ವಲಯ ಕುಗ್ಗುತ್ತಿದೆ. ಮೇವು ಮತ್ತು ನೀರಿನ ಕೊರತೆಯಿಂದ ಜಾನುವಾರುಗಳ ಸಂಖ್ಯೆ ಕ್ಷೀಣಿಸುತ್ತಿದೆ. ಸಾಂಪ್ರದಾಯಿಕ ಕಸುಬುಗಳು ನಶಿಸಿ ಆ ಜಾಗವನ್ನು ಯಂತ್ರೋಪಕರಣಗಳು ಆಕ್ರಮಿಸಿಕೊಂಡಿವೆ. ಅವುಗಳ ಬಳಕೆ ಅತಿಯಾಗುತ್ತಿದೆ. ಇವೆಲ್ಲವೂ ಬಿಸಿ ಗಾಳಿಗೆ ಕೊಡುಗೆ ನೀಡುತ್ತಿವೆ.

ಬಿಸಿ ಗಾಳಿಯಲ್ಲೂ ಸಾಮಾಜಿಕ ತಾರತಮ್ಯವಿದೆ. ಬಡವರಿಗೊಂದು ಬಲ್ಲಿದರಿಗೊಂದು ಬಗೆ ಇದೆ. ಬಲ್ಲಿದರು ಮಟ್ಟಸವಾದ ಮನೆ, ಫ್ಯಾನ್, ಫ್ರಿಜ್, ಏಸಿಗಳೆಂಬ ಸುರಕ್ಷಿತ ತಾಣಗಳು ಮತ್ತು ಸರಕುಗಳ ಮೊರೆ ಹೋದರೆ; ಬಡವರು ಬಿಸಿ ಗಾಳಿಗೇ ಮೈಯೊಡ್ಡಿ ಮಣಿಸುತ್ತಿದ್ದಾರೆ. ಬೀದಿ ಬದಿ ವ್ಯಾಪಾರಿಗಳು, ದಿನಗೂಲಿ ನೌಕರರು, ಕಟ್ಟಡ ಕಾರ್ಮಿಕರು, ಸುರಕ್ಷಿತ ಸೌಲಭ್ಯಗಳಿಲ್ಲದ ಮನೆಗಳಲ್ಲಿ ವಾಸಿಸುವ ಬಡಜನತೆ- ಇವರು ಬಿಸಿಗಾಳಿಯ ನೇರ ಬಲಿಪಶುಗಳು. ಅಂದರೆ, ಹವಾಮಾನ ಬದಲಾವಣೆ ಕೇವಲ ಪರಿಸರ ಸಮಸ್ಯೆಯಲ್ಲ, ಅದು ಸಾಮಾಜಿಕ ನ್ಯಾಯದ ಪ್ರಶ್ನೆಯೂ ಹೌದು.

ಆದರೆ, ಈ ತಾರತಮ್ಯ, ಈ ಎಚ್ಚರಿಕೆಯನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆಯೇ? ಸರ್ಕಾರಗಳು ಬಿಸಿ ಗಾಳಿಗೆ ತಾತ್ಕಾಲಿಕ ಪರಿಹಾರ ಕಾರ್ಯಗಳತ್ತ ಗಮನ ಹರಿಸಿವೆಯೇ? ದೇಶದ ಕೆಲವು ನಗರಗಳಲ್ಲಿ ಹೀಟ್ ಆಕ್ಷನ್ ಪ್ಲಾನ್‌ಗಳ ಘೋಷಣೆ ಇದ್ದರೂ, ಅವುಗಳ ಅನುಷ್ಠಾನದಲ್ಲಿ ಕೊರತೆ ಎದ್ದು ಕಾಣಿಸುತ್ತಿದೆ. ಹಸಿರು ವಲಯಗಳನ್ನು ಹೆಚ್ಚಿಸುವುದು, ನೀರನ್ನು ಸಂರಕ್ಷಿಸುವುದು, ಗಿಡ-ಮರಗಳನ್ನು ಬೆಳೆಸುವುದು, ವಿದ್ಯುತ್ ಬಳಕೆಯನ್ನು ನಿಯಂತ್ರಿಸುವುದು, ಪರಿಸರಸ್ನೇಹಿ ನಗರ ಯೋಜನೆ ರೂಪಿಸುವುದರತ್ತ ಹೆಚ್ಚು ಗಮನ ಹರಿಸಬೇಕಾಗಿದೆ. ಇಲ್ಲಿ ಸರ್ಕಾರಗಳ ರೀತಿ-ನೀತಿಗಳ ಜೊತೆಗೆ ಸಮಾಜದ ಜವಾಬ್ದಾರಿಯೂ ಹೆಚ್ಚಿದೆ. ಪ್ರತಿಯೊಬ್ಬರ ಪಾಲ್ಗೊಳ್ಳುವಿಕೆಯೂ ಪ್ರಮುಖ ಪಾತ್ರ ವಹಿಸಲಿದೆ.

ತಾಪಮಾನ ಹೆಚ್ಚಳ ಮತ್ತು ಬಿಸಿ ಗಾಳಿ ಪ್ರಕೃತಿಯ ಕೋಪವಲ್ಲ, ನಮ್ಮ ನಿರ್ಲಕ್ಷ್ಯದ ಪ್ರತಿಫಲ. ಇದು ಎಚ್ಚರಿಕೆಯ ಗಂಟೆ. ಇದನ್ನು ಅರಿತು ನಮಗಲ್ಲ, ನಮ್ಮ ಮಕ್ಕಳ ನೆಮ್ಮದಿಯ ಬದುಕಿಗಾಗಿ ಜಾಗೃತರಾಗಬೇಕಿದೆ. ಇಲ್ಲದಿದ್ದರೆ, ಇಂದಿನ ಬಿಸಿ ಗಾಳಿಯೇ ನಾಳೆಯ ಮಹಾಪ್ರಳಯವಾದರೂ ಆಶ್ಚರ್ಯವಿಲ್ಲ.

ತುಂಗಭದ್ರಾ, ನೀರಾವರಿ ವಲಯ ಹಂಗಾಮಿ ಕಾರ್ಮಿಕ ಸಂಘಟನೆಯಿಂದ ರಸ್ತೆ ತಡೆ

ಸಿರವಾರ.ಏ.11-

ನೀರಾವರಿ ಇಲಾಖೆಯ ಎಇಇ ವಿಜಯಲಕ್ಷ್ಮಿ ಪಾಟೀಲ್,ಹಾಗೂ ಇತರರ ವಿರುದ್ಧ ನೀರಾವರಿ ವಲಯದ ಹಂಗಾಮಿ ಕಾರ್ಮಿಕರಿಂದ ರಸ್ತೆ ತಡೆದು ಪ್ರತಿಭಟನೆ ನೀರಾವರಿ ವಲಯದ ಹಂಗಾಮಿ ಕಾರ್ಮಿಕರ ಗಂಭೀರ ಬೇಡಿಕೆಯೊಂದಿಗೆ,ಬಸವ ವೃತ್ತದ ಹತ್ತಿರ ದೇವದುರ್ಗ ಕ್ರಾಸ್‌ನಲ್ಲಿ ರಸ್ತೆ ತಡೆದು ಪ್ರತಿಭಟನೆ ಮಾಡಲಾಯಿತು

ಪಟ್ಟಣದ ನೀರಾವರಿ ಇಲಾಖೆಯಿಂದ ಮುಖ್ಯರಸ್ತೆಯ ಉದ್ದಕ್ಕೂ ಕಾಲ್ನಡಿಗೆ ಮೂಲಕ ಪ್ರತಿಭಟನೆ ಹಮ್ಮಿಕೊಂಡಿದ್ದು ಭ್ರಷ್ಟ ಅಧಿಕಾರಿ ಎಇಇ ವಿಜಯಲಕ್ಷ್ಮೀ ಪಾಟೀಲ್,ಅವರು ತುಂಗಭದ್ರಾ ನೀರಾವರಿ ವಲಯದ ಹಂಗಾಮಿ ಕಾರ್ಮಿಕರಿಗೆ





ವರ್ಷಗಳಿಂದ ಅನ್ಯಾಯ,ಶೋಷಣೆ ಹಾಗೂ ಆಡಳಿತದ ನಿರ್ಲಕ್ಷ್ಯಕ್ಕೆ ಕಾರಣರಾಗಿದ್ದು ಕುಟುಂಬಗಳ ಜೀವನಾಧಾರಕ್ಕಾಗಿ ದುಡಿಯುವ ಕಾರ್ಮಿಕರಿಗೆ ಸರಿಯಾದ ವೇತನ ವಿಲ್ಲ,ಭದ್ರತೆ ಇಲ್ಲ,ಗೌರವ ವಿಲ್ಲ.ಕಾರ್ಮಿಕರಿಗೆ ನೀಡಬೇಕಾದ 80 ದಿನಗಳ ಬಾಕಿ ವೇತನವು ನೀಡಿಲ್ಲ ಹಂಗಾಮಿ ಕಾರ್ಮಿಕರ ಕುಟುಂಬ ಬೀದಿಗೆ ಬಂದಿದೆ,

ತಕ್ಷಣ ಹಂಗಾಮಿ ಕಾರ್ಮಿಕರ ಹಣ ಬಿಡುಗಡೆ ಮಾಡಬೇಕು,ಭ್ರಷ್ಟ ಅಧಿಕಾರಿ ಎಇಇ ವಿಜಯಲಕ್ಷ್ಮಿ ಪಾಟೀಲ್ ಹಾಗೂ ಇತರರ ವಿರುದ್ಧ ಕೂಡಲೇ ಪ್ರಕರಣ ದಾಖಲು ಮಾಡಬೇಕು ಮತ್ತು ಅವರ ರಕ್ಷಣೆಗೆ ನಿಂತ ಪೋಲಿಸ್ ಅಧಿಕಾರಿಗಳ ಧೋರಣೆಯನ್ನು ತೀವ್ರವಾಗಿ ಖಂಡಿಸಿ ಜಿಲ್ಲಾಧಿಕಾರಿಗಳಿಗೆ ಬರೆದ ಮನವಿಯನ್ನು ತಹಶೀಲ್ದಾರ ಅಶೋಕ ಪವಾರ್ ಅವರಿಗೆ ಸಲ್ಲಿಸಿದರು.ಈ ಸಂದರ್ಭದಲ್ಲಿ ತುಂಗಭದ್ರಾ ನೀರಾವರಿ ವಲಯ ಹಂಗಾಮಿ ಕಾರ್ಮಿಕರ ಸಂಘದ ಮುಖಂಡರಾದ,ಎಂ ಗಂಗಾಧರ, ಜಿ ಅಡವಿರಾವ್, ಅಮರೇಗೌಡ ಸಿರವಾರ,ರುಕ್ಕಪ್ಪಮಾನವಿ,ಶರಣಪ್ಪ ಕವಿತಾಳ, ಹನುಮಂತಪ್ಪ ಸಿಂಧನೂರು, ಹನುಮಂತ ಅಂಬಿಗ ಸಿರವಾರ, ಬಸವರಾಜ, ರಮೇಶ, ಆದೇಶ ನಗನೂರು,ಖಾಜಾ ಸಾಬ್ ಕವಿತಾಳ, ನರಸಪ್ಪ ಯಾರಗೇರಾ,ಶಫೀ ಯಾರಮರಸ್,ಚಾಂದ್ ಗಿಲ್ಲೇಸಗೂರು, ಮುದುಕಪ್ಪ ಕಲ್ಲೂರು, ಹುಲಿಗೆಪ್ಪ ಕೊಟ್ನೇಕಲ್, ಸೇರಿದಂತೆ ಇನ್ನು ಅನೇಕ ಮುಖಂಡರು ಇದ್ದರು.

ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ನೀತಿ ಜಾರಿ

ಬೆಂಗಳೂರು,ಏ.11-

ಜಾಗತಿಕವಾಗಿ ಇಂದಿನ ಸರ್ಕಾರಿ ಶಾಲಾ ಮಕ್ಕಳನ್ನು ಸಜ್ಜುಗೊಳಿಸಲು ರಾಜ್ಯ ಸರ್ಕಾರ ಸಜ್ಜಾಗಿದೆ. ಈ ಸಂಬಂಧ 2026-27 ನೇ ಸಾಲಿನಲ್ಲಿ ರಾಜ್ಯದ 15 ಜಿಲ್ಲೆಗಳ ಎಲ್ಲ ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ ನೀತಿ ಆರಂಭಿಸಲಾಗುತ್ತದೆ. ಎಲ್ಲ ಸರ್ಕಾರಿ ಶಾಲೆಗಳ

ಪ್ರಾಥಮಿಕ ಶಾಲಾ ಶಿಕ್ಷಕರು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ತರಗತಿ ನಡೆಸಲಿದ್ದಾರೆ. ಇತ್ತೀಚೆಗೆ ಎಸ್‌ಎಸ್‌ಎಲ್‌ಸಿಯಲ್ಲಿ ಹಿಂದಿ ಭಾಷೆ ಅಂಕಗಳನ್ನು ಕೈ ಬಿಟ್ಟ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಲಾಗಿತ್ತು.

ಮಕ್ಕಳ ಹಿತ ದೃಷ್ಟಿಯಿಂದ ದ್ವಿಭಾಷಾ ನೀತಿ ಜಾರಿ ಕುರಿತು ಹೇಳಿದ್ದ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರದ್ದು ಏಕಪಕ್ಷೀಯ ನಿರ್ಧಾರವೆಂಬ ಟೀಕೆಗಳು ಕೇಳಿ ಬಂದಿದ್ದವು. ಇದರ ನಡುವೆ ಸರ್ಕಾರ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಹದಿನೈದು ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ನೀತಿ ಆರಂಭಿಸಲು ಶಿಕ್ಷಣ ಇಲಾಖೆ ಪ್ಲ್ಯಾನ್ ಮಾಡಿಕೊಂಡಿದೆ. ಈ ಸಂಬಂಧ ಸರ್ಕಾರಿ ಪ್ರಾಥಮಿಕ ಶಿಕ್ಷಕರಿಗೆ ಇಂಗ್ಲಿಷ್ ತರಬೇತಿ ನೀಡುತ್ತಿದೆ.

ದ್ವಿಭಾಷಾ ಮಾಧ್ಯಮ ಪ್ರಯುಕ್ತ 2026-27ನೇ ಶೈಕ್ಷಣಿಕ ವರ್ಷ ಆರಂಭಕ್ಕೂ ಮುನ್ನ ಉದ್ದೇಶಿತ ಸರ್ಕಾರಿ ಶಾಲೆಗಳಲ್ಲಿ



ಬೋಧಿಸುತ್ತಿರುವ 1,55, 950 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲಿಷ್ ಮೀಡಿಯಂ ಟೀಚರ್ಸ್ ಟ್ರೈನಿಂಗ್ (ಇಮಿಟಿಟಿ) ಅನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ವತಿಯಿಂದ ನೀಡಲಾಗುತ್ತಿದೆ. ರಾಜ್ಯದ ಎಲ್ಲ ಡಯಟ್‌ಗಳಲ್ಲಿ ಈ ತರಬೇತಿ ನಡೆಯುತ್ತಿದೆ.

3 ಹಂತಗಳಲ್ಲಿ ಶಿಕ್ಷಕರಿಗೆ ತರಬೇತಿ ಮಕ್ಕಳಿಗೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲಿಷ್‌ನಲ್ಲಿ ಪಾಠ ಮಾಡುವುದನ್ನು ಹೇಳಿಕೊಡಲು ಅವರಿಗೆ ಇಂಗ್ಲಿಷ್ ತರಬೇತಿ ನೀಡಲಾಗುತ್ತಿದೆ. ನುರಿತ ಪರಿಣಿತರಿಂದ ಶಿಕ್ಷಕರಿಗೆ ಈಗಾಗಲೇ ತರಬೇತಿ ಆರಂಭಿಸಲಾಗಿದೆ. ಒಟ್ಟು ಮೂರು ಹಂತಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಮೊದಲಿಗೆ ಪ್ರತಿ ಜಿಲ್ಲೆಯಿಂದ ರಾಜ್ಯದ ಒಬ್ಬರು ಡಯಟ್‌ನಿಂದ ನೂಡಲ್ ಅಧಿಕಾರಿಗಳಂತೆ ರಾಜ್ಯದ ಒಟ್ಟು 385 ಎಂಆರ್‌ಪಿಗಳಿಗೆ ಬೆಂಗಳೂರಿನ ಪ್ರತಿಷ್ಠಿತ ಪ್ರಾದೇಶಿಕ ಇಂಗ್ಲಿಷ್ ಸಂಸ್ಥೆ ದಕ್ಷಿಣ ಭಾರತ ಆರ್ ಐಇಎಸ್‌ಐ ಅವರಿಂದ ತರಬೇತಿ ಕೊಡಿಸಲಾಗುತ್ತಿದೆ. ಸಂಪನೂಲ ವ್ಯಕ್ತಿಗಳಿಂದ ತರಬೇತಿಯನ್ನು ಎರಡನೇ ಹಂತದಲ್ಲಿ ರಾಜ್ಯ ಸಂಪನೂಲ ವ್ಯಕ್ತಿಗಳಂತೆ ಪ್ರತಿ ತಾಲ್ಲೂಕುಗಳಿಂದ ತಲಾ 15 ಸಂಪನೂಲ ವ್ಯಕ್ತಿಗಳಿಂದ ಒಟ್ಟು ರಾಜ್ಯದ 3060 ಎಂಆರ್‌ಪಿಗಳಿಗೆ ಜಿಲ್ಲಾ ಹಂತದಲ್ಲಿ ತರಬೇತಿ ಕೊಡಿಸುವ ಕಾರ್ಯಕ್ರಮ ಚಾಲ್ತಿಯಲ್ಲಿದೆ.

ಮೂರನೇ ಹಂತದಲ್ಲಿ ದ್ವಿಭಾಷಾ ಮಾಧ್ಯಮ ಜಾರಿಗೆ ತರುವ ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದೆ. ಈ ಮೂಲಕ ಇಂಗ್ಲಿಷ್ ಮಾಧ್ಯಮದಲ್ಲಿಯೂ ಬೋಧಿಸಲು ಸರ್ಕಾರಿ ಶಾಲಾ ಶಿಕ್ಷಕರು ಸಜ್ಜಾಗುತ್ತಿದ್ದಾರೆ. ಇದು ಮಕ್ಕಳ ಭವ್ಯ ಭವಿಷ್ಯ ಹಾಗೂ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳ ಸುಧಾರಣೆಗೆ, ಶಿಕ್ಷಣ ವ್ಯವಸ್ಥೆಯಲ್ಲಿನ ಮಹತ್ತರ ಬದಲಾವಣೆಗೆ ಕಾರಣವಾಗಲಿದೆ ಎಂದು ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ವೃಂದಾವನದ ದೋಣಿ ದುರಂತದಲ್ಲಿ ಒಂದೇ ಕುಟುಂಬದ 7 ಜನರ ಸಾವು: ಮುಗಿಲು ಮುಟ್ಟಿದ ಸಂಬಂಧಿಕರ ಆಕ್ರಂದನ

ಮಥುರಾ (ಉತ್ತರ ಪ್ರದೇಶ),ಏ.11-

ಬಂಕೆ ಬಿಹಾರಿಯ ದರ್ಶನ ಪಡೆಯಲು ವೃಂದಾವನಕ್ಕೆ ತೆರಳಿದ್ದ ಪಂಜಾಬ್‌ನ ಲುಧಿಯಾನದ ಭಕ್ತರು ದೊಡ್ಡ ದುರಂತದಿಂದಾಗಿ ಬಲಿಯಾಗಿದ್ದಾರೆ. ಶುಕ್ರವಾರ, ಕೆ. ಸಿ. ಘಾಟ್‌ನಲ್ಲಿ ಪಾಂಟೂನ್ ಸೇತುವೆಗೆ ಡಿಕ್ಕಿ ಹೊಡೆದ ನಂತರ ಸ್ಟೀಮರ್ (ಬೋಟ್) ಮಗುಚಿ ಬಿದ್ದ ಪರಿಣಾಮ ಅದರಲ್ಲಿದ್ದ 10 ಭಕ್ತರು ಸಾವನ್ನಪ್ಪಿದ್ದರು. ಮೃತರಲ್ಲಿ ಏಳು ಮಂದಿ ಒಂದೇ ಕುಟುಂಬಕ್ಕೆ ಸೇರಿದವರು ಎಂಬುದು ತಿಳಿದುಬಂದಿದೆ.

ಅಪಘಾತದ ಸಮಯದಲ್ಲಿ ಸುಮಾರು 40 ಭಕ್ತರು ಸ್ಟೀಮರ್‌ನಲ್ಲಿದ್ದರು. ಘಟನೆಯ ನಂತರ ತಡರಾತ್ರಿಯವರೆಗೂ ರಕ್ಷಣಾ ಕಾರ್ಯಾಚರಣೆ ಮುಂದುವರೆಯಿತು. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮತ್ತು ಸೇನೆಯ ಸಿಬ್ಬಂದಿ ಯಮುನಾ ನದಿಯಲ್ಲಿ ಮುಳುಗುತ್ತಿದ್ದ 22 ಭಕ್ತರನ್ನು ಯಶಸ್ವಿಯಾಗಿ ರಕ್ಷಿಸಿದ್ದಾರೆ. ಅದರಲ್ಲಿ ಸುಮಾರು ಐದು ಜನರು ಕಾಣೆಯಾಗಿದ್ದು, ಅವರಿಗಾಗಿ ಹುಡುಕಾಟ ಮುಂದುವರೆದಿದೆ.

ಯಮುನಾ ನದಿಯಲ್ಲಿ ಸಂಭವಿಸಿದ ಈ ಅಪಘಾತದಲ್ಲಿ ಪ್ರಾಣ ಕಳೆದುಕೊಂಡ ಒಂದೇ ಕುಟುಂಬದ ಏಳು ಸದಸ್ಯರನ್ನು ಕವಿತಾ ಬೆಹ್ಲ್, ಚರಣ್‌ಜಿತ್, ಪಿಂಕಿ (ಚರಣ್‌ಜಿತ್ ಅವರ ಪತ್ನಿ), ಮಧುರ್ ಬೆಹ್ಲ್ (ವಿಜಯ್ ಕುಮಾರ್ ಅವರ ಮಗ), ಇಶಾಂತ್ ಕಟಾರಿಯಾ, ಸಪ್ನಾ ಮತ್ತು ಹಸನ್ ಎಂದು ಗುರುತಿಸಲಾಗಿದೆ. ಈ ಕುಟುಂಬವು ಲುಧಿಯಾನದ ಜಗ್ರಾಂವ್‌ನ ಗೀತಾ ಕಾಲೋನಿಯವರು ಎಂಬುದು ತಿಳಿದುಬಂದಿದೆ.

ಅದೇ ರೀತಿ, ರಾಕೇಶ್ ಗುಲಾಟಿ (ಲುಧಿಯಾನದ 2ನೇ ಹಂತದ ದುಗ್ರಿ ನಿವಾಸಿ), ಆಶಾ ಮಿದ್ಧಾ (ಭಿವಾನಿಯ ನಿವಾಸಿ) ಮತ್ತು ಮೀನು ಬನ್ಸಾಲ್ (ಲುಧಿಯಾನದ 2 ನೇ ಹಂತದ ದುಗ್ರಿ ನಿವಾಸಿ) ಕೂಡ ಈ ದುರಂತದಲ್ಲಿ ಸಾವನ್ನಪ್ಪಿದ್ದಾರೆ.

ತಡರಾತ್ರಿಯವರೆಗೂ ಮುಂದುವರೆದ ರಕ್ಷಣಾ



ಕಾರ್ಯಾಚರಣೆ : ಯಮುನಾ ನದಿಯಲ್ಲಿ ಸ್ಟೀಮರ್ ಮಗುಚಿ ಬಿದ್ದಿದೆ ಎಂಬ ವರದಿಗಳು ಬಂದ ಕೂಡಲೇ ಜಿಲ್ಲಾಡಳಿತ ಮತ್ತು ಎನ್‌ಡಿಆರ್‌ಎಫ್ ತಂಡ ಸ್ಥಳಕ್ಕೆ ಧಾವಿಸಿತು. ತಕ್ಷಣವೇ ರಕ್ಷಣಾ ಕಾರ್ಯಾಚರಣೆ ಆರಂಭಿಸಿ 22 ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಯಿತು. ಅದಾಗ್ಯೂ, ಸ್ಟೀಮರ್ ಪತ್ತೆಯಾಗದ ಕಾರಣ, ಎಸ್‌ಡಿಆರ್‌ಎಫ್ ಮತ್ತು ಸೇನಾ ಸಿಬ್ಬಂದಿಯನ್ನು ಕರೆಸಬೇಕಾಯಿತು. ಬೋಟ್ ಹುಡುಕಾಟ ತಡರಾತ್ರಿಯವರೆಗೂ ಮುಂದುವರೆಯಿತು. ಈ ವೇಳೆ ಇತರ ಬೋಟ್‌ನವರು ಮತ್ತು ದೋಣಿಗಳು ಅವರ ಸಹಾಯಕ್ಕೆ ಬಂದಿವೆ ಎಂದು ವರದಿಯಾಗಿದೆ.

ಬೋಟ್‌ನಲ್ಲಿದ್ದ ಎಲ್ಲಾ ಭಕ್ತರು ಭಜನೆಗಳನ್ನು ಹಾಡುತ್ತಿದ್ದರು. ಆದರೆ, ಇದ್ದಕ್ಕಿದ್ದಂತೆ ಬಲವಾದ ಗಾಳಿ ಬೀಸಿದ್ದರಿಂದಾಗಿ ಸ್ಟೀಮರ್ ಪಾಂಟೂನ್ ಸೇತುವೆಗೆ ಡಿಕ್ಕಿ ಹೊಡೆದು, ಪಲ್ಟಿಯಾಗಿ ಸುಮಾರು 30 ಅಡಿ ಆಳಕ್ಕೆ ಮುಳುಗಿತು ಎಂದು ತಿಳಿದುಬಂದಿದೆ.


ಸಹಾಯವಾಣಿ ಸಂಖ್ಯೆಯನ್ನು ನೀಡಲಾಗಿದೆ : ಜಿಲ್ಲಾಡಳಿತವು 0565 2403200 ಮತ್ತು 9454417512 ಸೇರಿದಂತೆ ಸಹಾಯವಾಣಿ ಸಂಖ್ಯೆಗಳನ್ನು ಬಿಡುಗಡೆ ಮಾಡಿದೆ. ಜೊತೆಗೆ ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ (ಹಣಕಾಸು ಮತ್ತು ಕಂದಾಯ) ಡಾ. ಪಂಕಜ್ ವರ್ಮಾ (9454417583) ಮತ್ತು ಎಸ್ಪಿ (ಗ್ರಾಮೀಣ) ಸುರೇಶ್ ಚಂದ್ರ ರಾವತ್ (9454401103) ಅವರ ಮೊಬೈಲ್ ಸಂಖ್ಯೆಗಳನ್ನೂ ಸಹ ನೀಡಿದೆ. ಅಪಘಾತಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿ ಅಥವಾ ಸಹಾಯಕ್ಕಾಗಿ ಈ ಸಂಖ್ಯೆಗಳನ್ನು ಸಂಪರ್ಕಿಸಬಹುದು. ಪ್ರಸ್ತುತ, ಮೃತರ ಶವಗಳನ್ನು ಶವಾಗಾರಕ್ಕೆ ಸಾಗಿಸಲಾಗಿದೆ ಮತ್ತು ಅವರ ಕುಟುಂಬಗಳಿಗೆ ಸೂಕ್ತ ಮಾಹಿತಿ ನೀಡಲಾಗಿದೆ. ಜಿಲ್ಲಾಡಳಿತವು ಕುಟುಂಬಗಳಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುವುದಾಗಿ ಭರವಸೆ ನೀಡಿದೆ.

ಸರಕಾರಿ ಕಾಲೇಜು ಮಕ್ಕಳ ಶ್ರೇಷ್ಠ ಸಾಧನೆ

ಲಿಂಗಸುಗೂರು ಏ -11 ತಾಲೂಕಿನ ಸರಕಾರಿ ಪದವಿಪೂರ್ವ ಕಾಲೇಜು ರೋಡಲಬಡಾ(ಯುಕೆಪಿ) ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು, ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಒಟ್ಟು 42 ವಿದ್ಯಾರ್ಥಿಗಳಲ್ಲಿ 38 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.90.47 ಫಲಿತಾಂಶ ದಾಖಲಾಗಿದೆ. ಇದರಲ್ಲಿ 05 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 29 ಮಂದಿ ಪ್ರಥಮ ದರ್ಜೆ, 04 ಮಂದಿ ದ್ವಿತೀಯ ದರ್ಜೆಪಡೆದು ಉತ್ತೀರ್ಣರಾಗಿದ್ದಾರೆ.

ವೈಯಕ್ತಿಕ ಸಾಧನೆಯಲ್ಲಿ ಕುಮಾರ ಲಕ್ಕಪ್ಪ ತಂ/ ಹನುಮಂತ 545 ಅಂಕಗಳೊಂದಿಗೆ ಅಗ್ರಸ್ಥಾನ ಪಡೆದರೆ, ಶೀಲಾ ತಂ/ ಹನುಮಂತ 531, ಅಂಕ ಪಡೆದು ಕಾಲೇಜಿಗೆ ದ್ವಿತೀಯ ಸ್ಥಾನ ಪಡೆದಿದ್ದಾಳೆ ಐಶ್ವರ್ಯ ಕನಕಲಿಮಠ 521 ಪಡೆದು ತೃತೀಯ ಸ್ಥಾನಕ್ಕೆ ತೃಪ್ತಿಕರರಾಗಿದ್ದಾಳೆ. ಅದೇ ರೀತಿಯಲ್ಲಿ ಅಂಬಿಕಾ ತಂ/ ಭೀಮಪ್ಪ 517 ಸುನಿತಾ ತಂ/ ಯಮುನಪ್ಪ ಬಿಜ್ಜೂರ, ಲಕ್ಷ್ಮೀ ಸಂಗಣ್ಣ 505 ಲಾಳಿಮಾ 501 ಸಾಕ್ಷಿ ಕನಕಲಿಮಠ 499 ಹಾಗೂ ದೀಪಾ 498 ಅಂಕಗಳನ್ನು ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ. ಇದುರಲ್ಲಿ ಶೇಕಡಾ ವಾರು ಕನ್ನಡ 97.62% ಇಂಗ್ಲಿಷ್ 90.48% ಇತಿಹಾಸ 100% ಅರ್ಥಶಾಸ್ತ್ರ 100% ಸಮಾಜಶಾಸ್ತ್ರ, 100% ರಾಜ್ಯಶಾಸ್ತ್ರ, 97.62%ಒಟ್ಟು ಕಾಲೇಜಿನ ಫಲಿತಾಂಶ ಶೇ 90.47% ಪಡೆದು ಕೀರ್ತಿ ಹೆಚ್ಚಿಸಿದ್ದಾರೆ.ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಪ್ರಾಚಾರ್ಯರಾದ ಕಾಳಿಂಗಪ್ಪ ವಾಲಿಕಾರ ಹಿರಿಯ ಉಪನ್ಯಾಸಕರಾದ ಗದ್ದೆಪ್ಪ ಈಚನಾಳ, ಇಂದುಧರ್ ಉಪನ್ಯಾಸಕರು ಹಾಗೂ ಕಾಲೇಜಿನ ಅತಿಥಿ ಉಪನ್ಯಾಸಕರು ಸೇರಿದಂತೆ ಸಿಬ್ಬಂದಿ ಹಾಗೂ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.



ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಜನತಾ ಸಮಾವೇಶದ ಮೂಲಕ ಪಕ್ಷದ ಬೆಳ್ಳಿಹಬ್ಬ ಆಚರಿಸಿ ಶಕ್ತಿ ಪ್ರದರ್ಶನ ಮಾಡಿದ ಜೆಡಿಎಸ್

ಬೆಂಗಳೂರು,ಏ.11-

ನಗರದ ಹೊರವಲಯದ ಕೊಮಘಟ್ಟದ ಬಳಿಯ ಮೈದಾನದಲ್ಲಿ ಇಂದು ಜೆಡಿಎಸ್ ಜನತಾ ಸಮಾವೇಶ ಹಾಗೂ ಪಕ್ಷದ ಬೆಳ್ಳಿಹಬ್ಬ ಆಚರಣೆ ಮಾಡುವ ಮೂಲಕ ಶಕ್ತಿ ಪ್ರದರ್ಶನ ಮಾಡಿತು. ಅಸ್ತಿತ್ವ ಕಳೆದುಕೊಳ್ಳುತ್ತಿದೆ ಎಂದು ಟೀಕಿಸುವವವರಿಗೆ ಉತ್ತರವಾಗಿ ಈಗಾಗಲೇ ಹಾಸನ ಮತ್ತು ವಿಜಯಪುರದಲ್ಲಿ ಯಶಸ್ವಿ ಸಮಾವೇಶಗಳನ್ನು ನಡೆಸಿತ್ತು. ಅದೇ ರೀತಿ ಬೆಂಗಳೂರಿನಲ್ಲೂ ಜೆಡಿಎಸ್ ನೆಲೆ ಭದ್ರವಾಗಿದೆ ಎಂಬುದನ್ನು ಸಾಬೀತುಪಡಿಸಲು ಬೃಹತ್ ಸಮಾವೇಶವನ್ನು ಇಂದು ನಡೆಸಿತು.

ನಗರದ ವಿವಿಧ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿ ಹಾಗೂ ಬಡಾವಣೆಗಳಿಂದ ಜೆಡಿಎಸ್ ಕಾರ್ಯಕರ್ತರು ಸಮಾವೇಶಕ್ಕೆ ತಂಡೋಪತಂಡವಾಗಿ ಆಗಮಿಸಿದರು.ಮುಂಬರುವ ಜಿಬಿಎ ವ್ಯಾಪ್ತಿಯ ನಗರಪಾಲಿಕೆ ಚುನಾವಣೆಗೆ ಸಜ್ಜಾಗುವಂತೆ, ಪಕ್ಷದ ಸಂಘಟನೆಯನ್ನು ಚುರುಕುಗೊಳಿಸುವುದು, ಸದಸ್ಯತ್ವ ನೋಂದಣಿ ಹೆಚ್ಚಿಸುವುದಕ್ಕೆ ಪಕ್ಷದ ವರಿಷ್ಠರು ಕಾರ್ಯಕರ್ತರಿಗೆ ಸಲಹೆ ಮಾಡಿದರು. ರಾಜ್ಯಸರ್ಕಾರದ ವೈಫಲ್ಯಗಳ ಬಗ್ಗೆ ಜನಜಾಗೃತಿ ಮೂಡಿಸುವುದು ಹಾಗೂ ಜನಪರ ಹೋರಾಟಗಳನ್ನು ಹಮಿಕೊಳ್ಳುವ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿದರು. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರ ಅಧಿಕಾರವಧಿಯಲ್ಲಿ ಬೆಂಗಳೂರು ಅಭಿವೃದ್ಧಿಗೆ ನೀಡಿರುವ ಕೊಡುಗೆಗಳನ್ನು ಬಣ್ಣಿಸಲಾಯಿತು.

ಬೆಂಗಳೂರಿಗೆ ಕಾವೇರಿ ನೀರು ಒದಗಿಸಿರುವುದು, ಸಂಚಾರ ದಟ್ಟಣೆ ತಗ್ಗಿಸಲು ಮೇಲ್ಸೇತುವೆ ಪ್ರಾರಂಭಿಸಿರುವುದು, ಮೆಟ್ರೋ ಯೋಜನೆಗೆ ಚಾಲನೆ ಸೇರಿದಂತೆ ಹಲವು ಮಹತ್ವದ ಕೊಡುಗೆಗಳನ್ನು ನೀಡಲಾಗಿದೆ. ದೇವೇಗೌಡರು ಮತ್ತು ಕುಮಾರಸ್ವಾಮಿಯವರು ನೀಡಿರುವ ಕೊಡುಗೆಗಳನ್ನು ಜನರಿಗೆ ಮನವರಿಕೆ ಮಾಡಿ ವಿಶ್ವಾಸ ಗಳಿಸಲು ಕಾರ್ಯಕರ್ತರಿಗೆ ಕರೆ ನೀಡಲಾಯಿತು.

ಕಾಂಗ್ರೆಸ್ ಹಾಗೂ ರಾಜ್ಯಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪಕ್ಷದ ನಾಯಕರು, ಮುಂಬರುವ 2028ರ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಅನ್ನು ಅಧಿಕಾರಕ್ಕೆ ತರಬೇಕು. ಅದಕ್ಕಾಗಿ ಈಗಿನಿಂದಲೇ ಸಿದ್ಧತೆಗಳನ್ನು ಆರಂಭಿಸಲು ಸೂಚಿಸಲಾಯಿತು. ಇದೇ ರೀತಿ ರಾಜ್ಯದ ವಿವಿಧೆಡೆ ಸಮಾವೇಶಗಳನ್ನು ನಡೆಸಿ ಮುಂಬರುವ ಚುನಾವಣೆಗಳಿಗೆ ಪಕ್ಷವನ್ನು ಸರ್ವರೀತಿಯಲ್ಲಿ ಸಜ್ಜುಗೊಳಿಸುವುದಾಗಿ ಪ್ರಕಟಿಸಲಾಯಿತು. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ಕೋರ್‌ಕಮಿಟಿ ಅಧ್ಯಕ್ಷ ಎಂ.ಕೃಷ್ಣಾರೆಡ್ಡಿ, ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ವಿಧಾನಪರಿಷತ್ ಸದಸ್ಯ ಟಿ.ಎ.ಶರವಣ, ಜಿಬಿಎ ಅಧ್ಯಕ್ಷ ಎಚ್.ಎಂ.ರಮೇಶ್‌ಗೌಡ ಸೇರಿದಂತೆ ಸಂಸದರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ಪಕ್ಷದ ವಿವಿಧ ಪದಾಧಿಕಾರಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR